ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 74 RNI Number : KNKAN/25/A2770 23-03-2026 Monday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :74 ರಾಯಚೂರು 23-03-2026 ಸೋಮವಾರ ಪುಟ 04 ಬೆಲೆ ರೂ.2/- ಮೊ:8660146563

ಭಾರತದ ರಾಜಕೀಯದಲ್ಲಿ ಇತಿಹಾಸ ಸೃಷ್ಟಿಸಿದ ಪ್ರಧಾನಿ ಮೋದಿ: ಈ ದಾಖಲೆ ಬರೆದ ದೇಶದ ಮೊದಲಿಗ

ನವದೆಹಲಿ,ಮಾ.22-

ಭಾರತದ ರಾಜಕೀಯದಲ್ಲಿ ಮುಟ್ಟಿದ್ದೆಲ್ಲವನ್ನೂ ಚಿನ್ನ ಮಾಡಿಕೊಂಡ ಪ್ರಧಾನಿ ನರೇಂದ್ರ ಮೋದಿ ಅವರು ಮತ್ತೊಂದು ಅಭೂತಪೂರ್ವ ಮೈಲಿಗಲ್ಲು ಸಾಧಿಸಿದ್ದಾರೆ. ಅವರು ಚುನಾಯಿತ ಸರ್ಕಾರದ ಮುಖ್ಯಸ್ಥರಾಗಿ ಅತಿ ಹೆಚ್ಚು ದಿನ ಅಧಿಕಾರ ನಡೆಸಿದ ಮೊದಲ ನಾಯಕ ಎಂಬ ಖ್ಯಾತಿಗೆ ಪಾತ್ರರಾಗಿದ್ದಾರೆ.

ಮೋದಿ ಅವರು ಮುಖ್ಯಮಂತ್ರಿ, ಪ್ರಧಾನಿಯಾಗಿ ಸರ್ಕಾರದ ಚುಕ್ಕಾಣಿಯನ್ನು ಹಿಡಿದು ಇಂದಿಗೆ 8931 ದಿನಗಳಾಗಿವೆ. ಈ ಮೂಲಕ ಸಿಕ್ಕಿಂನ ಮುಖ್ಯಮಂತ್ರಿ ಪವನ್ ಕುಮಾರ್ ಚಾಮ್ಲಿಂಗ್ ಅವರ ದಾಖಲೆಯನ್ನು ಮುರಿದರು. ಚಾಮ್ಲಿಂಗ್ ಅವರು 8930 ದಿನಗಳು ಅಧಿಕಾರ ನಡೆಸಿ ದೇಶದಲ್ಲಿಯೇ ಅತಿಹೆಚ್ಚು ದಿನ ಆಡಳಿತ ನಡೆಸಿದ ಮೊದಲಿಗರಾಗಿದ್ದರು.

ಮೋದಿ ಅವರ ಅಧಿಕಾರಾವಧಿಯನ್ನು ಎರಡು ಹಂತದಲ್ಲಿ ವಿಂಗಡಿಸಲಾಗಿದೆ. ಗುಜರಾತ್ ರಾಜ್ಯದ ಮುಖ್ಯಮಂತ್ರಿ, ದೇಶದ ಪ್ರಧಾನಿಯಾಗಿ ಸೇವೆ ಸಲ್ಲಿಸಿದ ದಿನಗಳನ್ನು ಒಟ್ಟುಗೂಡಿಸಲಾಗಿದೆ. ಸರ್ಕಾರದ ಮುಖ್ಯಸ್ಥರಾಗಿ 25ನೇ ವರ್ಷಕ್ಕೂ ಅವರು ಕಾಲಿಟ್ಟಿರುವುದು ವಿಶೇಷ. ಈ ಮೈಲಿಗಲ್ಲನ್ನು ಅಪರೂಪದ ಮತ್ತು ಮಹತ್ವದ ಸಾಧನೆ ಎಂದು ಪರಿಗಣಿಸಲಾಗಿದೆ.

ನರೇಂದ್ರ ಮೋದಿ ಅವರ ದಾಖಲೆಗಳು: ಪ್ರಧಾನಿ ನರೇಂದ್ರ ಮೋದಿ



ಅವರು ತಮ್ಮ ರಾಜಕೀಯ ಜೀವನದಲ್ಲಿ ಹಲವು ದಾಖಲೆಗಳನ್ನು ನಿರ್ಮಿಸಿದ್ದಾರೆ. ಗುಜರಾತ್‌ನ ಸಿಎಂ ಆಗಿ ಅತಿ ಹೆಚ್ಚು ಕಾಲ ಸೇವೆ ಸಲ್ಲಿಸಿದ ಮೊದಲ ರಾಜಕಾರಣಿಯೂ ಹೌದು. ಅಲ್ಲದೆ, ಸ್ವಾತಂತ್ರ್ಯದ ನಂತರ ಜನಿಸಿ ಅತಿ ದೀರ್ಘ ಕಾಲ ದೇಶದ ಪ್ರಧಾನಿ ಹುದ್ದೆ ಅಲಂಕರಿಸಿದ ಮೊದಲಿಗ ಎಂಬ ದಾಖಲೆಯನ್ನೂ ಹೊಂದಿದ್ದಾರೆ. 2014, 2019 ಮತ್ತು 2024 ರಲ್ಲಿ ಸತತ ಮೂರು ಲೋಕಸಭಾ ಚುನಾವಣೆಗಳಲ್ಲಿ ಅವರು ಗೆಲುವು ಸಾಧಿಸಿದ್ದಾರೆ.

2001ರ ಅಕ್ಟೋಬರ್ 7 ರಂದು ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರು. ಅಂದಿನಿಂದ 2014ರ ಮೇ 21ರವರೆಗೆ ಆ ಹುದ್ದೆಯಲ್ಲಿದ್ದರು. 13 ವರ್ಷಗಳಿಗೂ ಹೆಚ್ಚು ಕಾಲ ರಾಜ್ಯವನ್ನು ಮುನ್ನಡೆಸಿ, ನಂತರ ರಾಷ್ಟ್ರ ರಾಜಕಾರಣಕ್ಕೆ ಅಡಿಇಟ್ಟರು. 2014ರ ಮೇ 26 ರಂದು ಅವರು ಭಾರತದ 14ನೇ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದರು.

ಪೂರ್ಣ ಬಹುಮತ ಸರ್ಕಾರದ ಮೊದಲ ಕಾಂಗ್ರೆಸ್ಸೇತರ ಪ್ರಧಾನಿ: 2014ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಅಭೂತಪೂರ್ವ ಗೆಲುವು ಸಾಧಿಸಿತು. ಇದರಲ್ಲಿ ಬಿಜೆಪಿ ಮಾತ್ರವೇ ಪೂರ್ಣ ಬಹುಮತ ಸಾಧಿಸಿತ್ತು. ಇದರಿಂದ, ಲೋಕಸಭೆಯಲ್ಲಿ ಪೂರ್ಣ ಬಹುಮತ ಪಡೆದು ಸರ್ಕಾರ ರಚಿಸಿದ ಮೊದಲ ಕಾಂಗ್ರೆಸ್ಸೇತರ ನಾಯಕ ಎಂಬ ಹೆಗ್ಗಳಿಕೆ ಪ್ರಧಾನಿ ನರೇಂದ್ರ ಮೋದಿ ಅವರದ್ದಾಗಿದೆ.

ನಂತರ ಅವರು ಎರಡು ಅವಧಿಗಳನ್ನು ಪೂರ್ಣಗೊಳಿಸಿ, ಸತತ ಮೂರನೇ ಅವಧಿಗೆ ಪ್ರಧಾನಿಯಾದ ಮೊದಲ ಕಾಂಗ್ರೆಸ್ಸೇತರ ಪ್ರಧಾನಿ ಎಂಬ ಖ್ಯಾತಿಯನ್ನೂ ಪಡೆದರು. ಈ ಮೈಲಿಗಲ್ಲಿನ ಜೊತೆಗೆ ಅವರು ಜನಪ್ರಿಯತೆ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಅತಿ ಹೆಚ್ಚು ಫಾಲೋವರ್ಸ್ ಹೊಂದಿರುವ ವಿಶ್ವದ ಮೊದಲ ನಾಯಕ ಎಂಬ ದಾಖಲೆಯನ್ನೂ ಹೊಂದಿದ್ದಾರೆ.

ಈ ತಿಂಗಳ ಆರಂಭದಲ್ಲಿ, ಮೋದಿ ಅವರು ತಮ್ಮ ಯೂಟ್ಯೂಬ್ ಚಾನಲ್‌ನಲ್ಲಿ 30 ಮಿಲಿಯನ್‌ಗೂ ಅಧಿಕ ಚಂದಾದಾರರನ್ನು ಪಡೆದರು. ಹೆಚ್ಚು ಫಾಲೋವರ್ಸ್ ಹೊಂದುವ ಮೂಲಕ ವಿಶ್ವ ನಾಯಕರಲ್ಲಿ ಒಬ್ಬರಾಗಿ ಗುರುತಿಸಿಕೊಂಡರು. ಅಲ್ಲದೆ, ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ಮತ್ತು ಸರ್ಕಾರದ ಮಾಜಿ ಮುಖ್ಯಸ್ಥರ ಪೈಕಿ ಅತಿ ಹೆಚ್ಚು ಫಾಲೋವರ್ಸ್ ಹೊಂದಿರುವ ರಾಜಕೀಯ ನಾಯಕ ಎಂದೆನಿಸಿಕೊಂಡಿದ್ದಾರೆ.

ಇನ್‌ಸ್ಟಾದಲ್ಲಿ 101 ಮಿಲಿಯನ್‌ಗೂ ಅಧಿಕ ಫಾಲೋವರ್ಸ್: ಈ ವರ್ಷದ ಫೆಬ್ರವರಿಯಲ್ಲಿ, ಪ್ರಧಾನಿ ಮೋದಿ ಅವರು ಇನ್‌ಸ್ಟಾಗ್ರಾಮ್‌ನಲ್ಲಿ 100 ಮಿಲಿಯನ್‌ಗೂ ಅಧಿಕ ಅನುಯಾಯಿಗಳನ್ನು ದಾಟಿದರು. ಇಷ್ಟು ಫಾಲೋವರ್ಸ್ ಹೊಂದಿದ ಮೊದಲ ವಿಶ್ವ ನಾಯಕ ಮತ್ತು ರಾಜಕಾರಣಿಯಾಗಿದ್ದಾರೆ. 2014 ರಲ್ಲಿ ಅವರು ಇನ್‌ಸ್ಟಾಗ್ರಾಮ್ ಖಾತೆ ಆರಂಭಿಸಿದ್ದರು. ಪ್ರಸ್ತುತ ಈ ಸಂಖ್ಯೆಯು 101 ಮಿಲಿಯನ್ ದಾಟಿದೆ. ಅದೇ ರೀತಿ, ಮೈಕ್ರೋ ಬ್ಲಾಗಿಂಗ್ ವೇದಿಕೆಯಾದ ಎಕ್ಸ್ ನಲ್ಲಿ (ಹಿಂದಿನ ಟ್ವಿಟರ್) ಪ್ರಧಾನಿ ಮೋದಿ ಅವರು 106.4 ಮಿಲಿಯನ್ ಅನುಯಾಯಿಗಳನ್ನು ಹೊಂದಿರುವುದೂ ದಾಖಲೆಯಾಗಿದೆ.



ವಿಶ್ವಕರ್ಮ ಸಮುದಾಯ ಭವನಕ್ಕೆ ಅನುದಾನ ವಸಂತಕುಮಾರ ಭರವಸೆ

ರಾಯಚೂರು. ಮಾ. 22.

ರಾಯಚೂರು ನಗರದಲ್ಲಿ ಬೇರುನ್ ಕಿಲ್ಲದಲ್ಲಿರುವ ಶ್ರೀ ಕಾಳಿಕಾ ದೇವಸ್ಥಾನದ ಆವರಣದಲ್ಲಿ ವಿಶ್ವಕರ್ಮ ಸಮುದಾಯ ಭವನ ನಿರ್ಮಿಸಲು ಅನುದಾನ ನೀಡುವುದಾಗಿ ವಿಧಾನ ಪರಿಷತ್ ಸದಸ್ಯರು ಹಾಗೂ ಕೆಪಿಸಿಸಿ ರಾಜ್ಯ ಕಾರ್ಯಧ್ಯಕ್ಷರಾದ

ಎ ವಸಂತಕುಮಾರ್ ಭರವಸೆ ನೀಡಿದರು.

ಅವರಿಂದು ವಿಧಾನ ಪರಿಷತ್ ಕಾರ್ಯಾಲಯದಲ್ಲಿ ವಿಶ್ವಕರ್ಮ ಸಮಾಜದ ಮುಖಂಡರ ಬಹು ದಿನಗಳ ಬೇಡಿಕೆಗೆ ಸ್ಪಂದಿಸಿದ ವಸಂತ ಕುಮಾರ್ ಅವರು ವಿಧಾನ ಪರಿಷತ್ತು ಅನುದಾನ ಅಡಿಯಲ್ಲಿ 50 ಲಕ್ಷ ರೂಪಾಯಿ ವಿಶ್ವಕರ್ಮ ಸಮುದಾಯ ಭವನಕ್ಕೆ ನೀಡುವುದಾಗಿ ಭರವಸೆ ನೀಡಿದರು. ಇಷ್ಟೊಂದು ಅನುದಾನ ನೀಡಿದ್ದು ನಮ್ಮ ಜಿಲ್ಲೆಯಲ್ಲಿ ಮೊದಲ ಬಾರಿಗೆ ಆಗಿದೆ ಎಂದು ಕರ್ನಾಟಕ ವಿಶ್ವಕರ್ಮ ಮಹಾಸಭಾ ರಾಯಚೂರು ಜಿಲ್ಲಾ ಅಧ್ಯಕ್ಷರಾದ ಮಾರುತಿ ಬಡಿಗೇರ್ ಅಭಿನಂದಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಬ್ರಹ್ಮ ಗಣೇಶ್. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ ರಾಮು ಗಾಣದಾಳ. ಕಾಳಿಕಾ ದೇವಸ್ಥಾನ ಅಧ್ಯಕ್ಷರಾದ ಎ. ಈಶ್ವರ. ವಿಶ್ವಕರ್ಮ ಕಾರ್ಪೆಂಟರ್ ಸಂಘದ ಅಧ್ಯಕ್ಷ ಬ್ರಹ್ಮಯ್ಯ

ಗಿರೀಬಾಬು. ಅನಂತಷಯನ. ನಾಗರಾಜ ಪತ್ತಾರ. ಪ್ರಕಾಶ ವಿಶ್ವಕರ್ಮ. ಮಿಲ್ಟ್ರಿ ಮಲ್ಲೇಶ್. ರಘುಜಿ ರಘು. ಜೆ ವೆಂಕು. ಆಕಾಶ. ಬಾಲಾಜಿ. ಎನ್ ಬಿ ಶ್ರೀಕಾಂತ್. ಕೆ ನರೇಶ್ ಜಿ ಕೆ ವೆಂಕಟೇಶ್ ನೂರಾರು ಜನ ವಿಶ್ವಕರ್ಮ ಯುವಕರು ಸೇರಿದ್ದರು.

ನಿಮ್ಮೂರು ಸುದ್ದಿ

ಸುದ್ದಿ ಹಾಗೂ ಜಾಹೀರಾತು ಗಳಿಗಾಗಿ ಸಂಪರ್ಕಿಸಿರಿ

8660146563

ಸಮಾಜದ ಅಭಿವೃದ್ಧಿ ಮಾಡಿದ್ದರೆ ದಾಖಲೆಗಳ ಸಮೇತ ಬಹಿರಂಗ ಚರ್ಚೆಗೆ ಬನ್ನಿ - ಲಿಂಗಯ್ಯನಾಯಕ

ಸಿರವಾರ, ಮಾ.22 :

ವಾಲ್ಮೀಕಿ ನಾಯಕ ಸಮಾಜದ ಮೀಸಲಾತಿಗೆ ಕನ್ನ ಹಾಕಲು ಹೊರಟಿರುವ ದಲಿತ ವಿರೋಧಿ ಸಚಿವರಾದ ಎನ್.ಎಸ್.ಭೋಸರಾಜು ಅವರ ಪರವಾಗಿ ಹೇಳಿಕೆ ನೀಡಿದ ನಮ್ಮ ಸಮಾಜದ ಜನಪ್ರಿಯ ನಾಯಕರು ಹಿರಿಯ ಶಾಸಕರಾದ ಜಿ ಹಂಪಯ್ಯ ನಾಯಕರ ಹೇಳಿಕೆಯನ್ನು ಸಿರವಾರ ತಾಲೂಕಿನ ಸಮಸ್ತ ವಾಲ್ಮೀಕಿ ನಾಯಕ ಸಂಘಟನೆಗಳ ಒಕ್ಕೂಟವು ತೀವ್ರವಾಗಿ ಖಂಡಿಸುತ್ತದೆ ಎಂದು ಶ್ರೀ ಆದಿಕವಿ ಮಹರ್ಷಿ ವಾಲ್ಮೀಕಿ ಯುವ ಬ್ರಿಗ್ರೇಡ್ ಸಂಘದ ರಾಜ್ಯಾದ್ಯಕ್ಷ ಲಿಂಗಯ್ಯ ನಾಯಕ ಸೈದಾಪುರ ಪತ್ರಿಕೆ ಮೂಲಕ ಆಗ್ರಹಿಸಿದ್ದಾರೆ



ಸಚಿವ ಎನ್ ಎಸ್ ಬೋಸರಾಜು, ಅವರು ದಲಿತ ನಾಯಕ ಸಮಾಜದ ಪರವಾಗಿದ್ದಾರೆ ಎಂದು ಕುರುಡು ಸಮರ್ಥನೆ ಮಾಡಿಕೊಳ್ಳುತ್ತಿರುವ ಶಾಸಕ ಜಿ.ಹಂಪಯ್ಯನಾಯಕ ಅವರ ಸಚಿವರ ಓಲೈಕೆಗಾಗಿ ಸಮಾಜದ ಕಣ್ಣಿಗೆ ಮಣ್ಣೆರಚುತ್ತಿರುವ ಶಾಸಕರಿಗೆ ನಾವು ನೇರ ಮತ್ತು ಬಹಿರಂಗ ಚರ್ಚೆಗೆ ಬನ್ನಿ ಶಾಸಕರೇ, ಸಚಿವರು ನಾಯಕ ಜನಾಂಗದ ಏಳಿಗೆಗಾಗಿ ಶ್ರಮಿಸುತ್ತಿದ್ದಾರೆ ಎಂದು ನೀವು ಹೇಳುತ್ತಿದ್ದೀರಿ. ಬರೀ ಗಾಳಿಯಲ್ಲಿ ಗುಂಡು ಹಾರಿಸುವ ಬದಲು,ಸತ್ಯಾಂಶವಿದ್ದರೆ ನಮ್ಮ ಪ್ರಶ್ನೆಗಳಿಗೆ ದಾಖಲೆ ಸಮೇತ ಉತ್ತರ ಕೊಡಿ ಶಾಸಕರಿಗೆ ನಮ್ಮ ನೇರ ಸವಾಲುಗಳು.

ಅಭಿವೃದ್ಧಿಯ ಲೆಕ್ಕ ಕೊಡಿ ಸಚಿವರ ನಡೆ ನಮ್ಮ

3 ನೇ ಪುಟಕ್ಕೆ

ಸದನದಲ್ಲಿ ವಿಷಪೂರಿತ ಮಧ್ಯಮಾರಾಟದ ಬಗ್ಗೆ ಧ್ವನಿ ಎತ್ತಿದ - ಬಸನಗೌಡ ದದ್ದಲ್

ಮಾನ್ವಿ,ಮಾ.22-

ಮೊನ್ನೆ ನಡೆದ ವಿಧಾನಸಭಾ ಅಧಿವೇಶನದಲ್ಲಿ ರಾಯಚೂರು ಗ್ರಾಮೀಣ ಶಾಸಕರಾದ ಬಸನಗೌಡ ದದ್ದಲ್ ರವರು ವಿಷಪೂರಿತ ಮಧ್ಯಮಾರಾಟ ನಿಷೇಧದ ಬಗ್ಗೆ ಧ್ವನಿ ಎತ್ತಿದ್ದು. ರಾಯಚೂರು ಮತ್ತು ರಾಯಚೂರು ಗ್ರಾಮೀಣ ಭಾಗವು ತೆಲಂಗಾಣ ಮತ್ತು ಆಂಧ್ರಾಪ್ರದೇಶದ ಗಡಿಭಾಗವಾಗಿದ್ದ ಕಾರಣ ಮಾಧಕ ವಸ್ತುಗಳಾದ ಸಿಎಚ್ ಪೌಡರ್ ಮಿಶ್ರಿತ್ ಹೆಂಡ, ಗಾಂಜಾ, ಡ್ರಗ್ಸ್ ಹಾಗು ಹೆಚ್ಚು ಆಲ್ಕೋ ಹಾಲ್ ಹೊಂದಿರುವಂತಹ ಮಧ್ಯಮಾರಾಟ ನಮ್ಮ ಗ್ರಾಮೀಣ ಭಾಗಕ್ಕೆ ಅಕ್ರಮವಾಗಿ ಸರಬರಾಜು ಆಗುತ್ತಿವೇ. ಇದಕ್ಕೆಲ್ಲ ಕಾರಣ ರಾಜಕೀಯ ವ್ಯಕ್ತಿಗಳ ಮತ್ತು ಶ್ರೀಮಂತ ಉದ್ಯಮಿಗಳ ಕೈವಾಡವಿದೆ ಎಂದು ಮೂಲಗಳಿಂದ ತಿಳಿದುಬಂದಿದೆ ಎಂದರು.

ಸುಮಾರು 13557 ಲೀ, ಸಿಂಧೇ ಮಾಧಕ ದ್ರವ್ಯ ಹಾಗು 183 ಕೇಸ್ ಗಳ ದಾಖಲೆ ಹಾಗು ಇನ್ನೂ ಇತರೆ 102 ಡ್ರಗ್ಸ್ ಕೇಸ್ ಗಳು ದಾಖಲಾಗಿದ್ದು. ಅದರೆ ಇದಾವುದನ್ನು ಲೆಕ್ಕಿಸಿದೇ ಆದೇ ದಂಧೆಯಲ್ಲಿ ತೊಡಗಿದ್ದಾರೆ. ಈ ಮಾಧಕ ದ್ರವ್ಯ ವಸ್ತುಗಳ ಸೇವನೆಯಿಂದ ನನ್ನ ರಾಯಚೂರು ಗ್ರಾಮೀಣ ಭಾಗದ ಜನರ ಕುಟುಂಬಗಳು ಸರ್ವನಾಶವಾಗುತ್ತಿವೆ. ವಿಷಪೂರಿತ ಮಧ್ಯಪಾನಕ್ಕೆ ಬಲಿಯಾಗಿ ಕುಟುಂಬದ ಯಜಮಾನ, ಯುವಕರು, ಆರೋಗ್ಯದ ಸಮಸ್ಯೆಯಿಂದ ಬಳಲುತ್ತಿದ್ದಾರೆ.



ಮಧ್ಯಪಾನಿಗಳಲ್ಲಿ ವಿಷಪೂರಿತ ಡ್ರಗ್ಸ್ ಕಲಬೆರಕೆಯಿಂದ ಹೊಮ್ಮೆ ಕುಡಿದರೇ ಮತ್ತೊಮ್ಮೆ ಅದನ್ನೇ ಕುಡಿಬೇಕು ಅನ್ನಿಸುತ್ತಿದೆ ಎಂದು ಕುಡಿತಕ್ಕೆ ಬಲಿಯಾದವರ ವಾದವಾಗಿದರಿಂದ ಕುಟುಂಬದಲ್ಲಿ

3 ನೇ ಪುಟಕ್ಕೆ

ಗ್ಯಾರಂಟಿ ಯೋಜನೆಗಳಿಗೆ ಬಜೆಟ್ ಮೀಸಲು ಸಾಲ ಪ್ರಮಾಣ ಹೆಚ್ಚಳ ಸುಳ್ಳು ಆರೋಪ-ಡಾ.ರಝಾಕ

ರಾಯಚೂರು, ಮಾ.22-

ಪಂಚ ಗ್ಯಾರಂಟಿಗಳಿಗೆ ಹೆಚ್ಚಿನ ಅನುದಾನ ಬಳಕೆ ಮಾಡುವುದರಿಂದ ರಾಜ್ಯದಲ್ಲಿ ಸಾಲದ ಪ್ರಮಾಣ ಹೆಚ್ಚಳಗೊಂಡಿದೆ ಎಂದು ಬಿಜೆಪಿ ಟೀಕಿಸುವುದು ಸರಿಯಲ್ಲ ಬಿಜೆಪಿ ಅವಧಿಯಲ್ಲಿ ಸಾಲ ಹೆಚ್ಚಳಗೊಂಡಿದೆ ಎಂದು ಕಾಂಗ್ರೆಸ್ ವಕ್ತರ ಡಾ.ರಝಾಕ ಉಸ್ತಾದ ಅವರು ಹೇಳಿದರು.



ರಾಜ್ಯ ಸರಕಾರದ 2026-27ನೇ ಸಾಲಿನ ಆಯವ್ಯಯವನ್ನು ಮುಖ್ಯ ಮಂತ್ರಿ ಸಿದ್ದರಾಯ್ಯನವರು ಸಧನದಲ್ಲಿ ಮಂಡಿಸಿದ್ದಾರೆ, 2026-27ನೇ ಸಾಲಿನ ಬಜೆಟ್ ಗಾತ್ರ 4,48,004 ಕೋ ರೂ ಎಂದು ಅಂದಾಜಿಸಲಾಗಿದೆ, ಇದರಲ್ಲಿ ಈ ಸಾಲಿನಲ್ಲಿ ಪಡೆದ ಸಾಲ 1,32,000 ಕೋ.ರೂ ಎಂದು, ಇದು ಹಣಕಾಸಿನ ಜವಾಬ್ದಾರಿ ಮತ್ತು ಬಜೆಟ್ ನಿರ್ವಹಣೆ ಕಾಯ್ದೆ-2003ರಂತೆ ರಾಜ್ಯದ ಜಿಎಸ್.ಡಿ.ಪಿಯ ಶೇ 25 ಕ್ಕಿಂತ ಕಡಿಮೆ ಎಂದು ಹೇಳಲಾಗಿದೆ, ಅಲ್ಲದೇ ರಾಜ್ಯದ ಜಿ.ಎಸ್.ಡಿ.ಪಿ.ಯ ಶೇ 2.95 ರಷ್ಟಿದ್ದು, ಇದು ಸಹ ಮಿತಿಯೊಳಗೆಯೇ ಇದೆ ಎಂದು ಬಜೆಟ್ನಲ್ಲಿ ಉಲ್ಲೇಖಿಸಲಾಗಿದೆ. ಈ ಬಜೆಟ್ ಮೂಲಕ ರಾಜ್ಯದ ಒಟ್ಟು ಸಾಲವು 2026-27ನೇ ಸಾಲಿನ

3 ನೇ ಪುಟಕ್ಕೆ

ಮದ್ಲಾಪೂರ: 123ನೇ ಮನೆ ಮನೆಗೆ ಅಂಬೇಡ್ಕರ್ ಕಾರ್ಯಕ್ರಮ

ಬಹುಜನರು ಅಂಬೇಡ್ಕರ್ ವಿಚಾರಗಳನ್ನು ಅರಿತು ಅಳವಡಿಸಿಕೊಳ್ಳಬೇಕು: ಸಂಪತ್ತುರಾಜ್

ಮಾನವಿ,ಮಾ.22-

ದೇಶದಲ್ಲಿ ಅನೇಕ ಮಹಾತ್ಮರು, ಸಾಧು ಸಂತರು ಹುಟ್ಟಿ ವಿಚಾರಗಳನ್ನು ಸಾರಿ ಜನರನ್ನು ಎಚ್ಚರಿಸಿದ್ದಾರೆ. ಆದರೆ ಬಾಬಾಸಾಹೇಬ್ ಅಂಬೇಡ್ಕರ್ ಅಸ್ಪೃಶ್ಯ ಜಾತಿಯಲ್ಲಿ ಹುಟ್ಟಿ, ಸ್ವತಃ ಅವಮಾನ, ನೋವುಗಳನ್ನು ಅನುಭವಿಸಿ, ಬಹುಜನರು ಘನತೆ - ಗೌರವದಿಂದ ಬದುಕುವ ವಿಚಾರಗಳನ್ನು ಸಾರಿ ಸಂವಿಧಾನಬದ್ಧವಾದ ಹಕ್ಕುಗಳನ್ನು ನೀಡಿದ ಶೋಷಿತರ ವಿಮೋಚಕ ಡಾ.ಬಿ.ಆರ್.ಅಂಬೇಡ್ಕರ್ ಎಂದು ಬಹುಜನ ಸಂಘರ್ಷ ಸಮಿತಿ ರಾಯಚೂರು ಜಿಲ್ಲಾಧ್ಯಕ್ಷ ಸಂಪತ್ತುರಾಜ್ ಜಾಗೀರಪನ್ನೂರ ಅಭಿಪ್ರಾಯ ವ್ಯಕ್ತಪಡಿಸಿದರು.



ಮಾನವಿ ತಾಲೂಕಿನ ಮದ್ಲಾಪೂರ ಗ್ರಾಮದ ಬಿ.ರಾಣಿ - ಭೀಮಣ್ಣ ಇವರ ಮನೆಯಲ್ಲಿ ಬಹುಜನ ಸಂಘರ್ಷ ಸಮಿತಿ ಹಾಗೂ ಜನತಾ ಸಾಮಾಜಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್(ರಿ) ಬಲ್ಲಟಗಿ ವತಿಯಿಂದ ಸೋಮವಾರ ಆಯೋಜಿಸಿದ್ದ, 123ನೇ ಮನೆ-ಮನೆಗೆ ಅಂಬೇಡ್ಕರ್ ಕಾರ್ಯಕ್ರಮದಲ್ಲಿ ಮುಖ್ಯಭಾಷಣಕಾರರಾಗಿ ಮಾತನಾಡಿದರು.

ದಲಿತರು, ಶೋಷಿತರು ಮೌಢ್ಯಗಳನ್ನು ಬಿಟ್ಟು, ಉತ್ತಮವಾದ ಶಿಕ್ಷಣವನ್ನು ಪಡೆದು ಜಾಗೃತರಾಗಿ ಸ್ವಾಭಿಮಾನದ ಬದುಕು ನಡೆಸಬೇಕು ಎಂದರು.

ಬಹುಜನ ಸಂಘರ್ಷ ಸಮಿತಿ ಸಂಸ್ಥಾಪಕ ಅಧ್ಯಕ್ಷ ಜೆ.ಶರಣಪ್ಪ ಬಲ್ಲಟಗಿ ಪ್ರಾಸ್ತಾವಿಕವಾಗಿ ಮಾತನಾಡಿ ಮನೆ ಮನೆಗೆ ತಲುಪಿ ಮಹಿಳೆ ಮತ್ತು ಮಕ್ಕಳನ್ನು

3 ನೇ ಪುಟಕ್ಕೆ

ಸಂವಿಧಾನದ 9ನೇ ಪರಿಚ್ಛೇದಕ್ಕೆ ತಿದ್ದುಪಡಿ ಉಗ್ರಪ್ಪ ಒತ್ತಾಯ

ರಾಯಚೂರು, ಮಾ.22-



ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಜನರ ಮೀಸಲಾತಿ ಪ್ರಮಾಣವನ್ನು ಶೇ.56ಕ್ಕೆ ಹೆಚ್ಚಳ ಮಾಡಿರುವ 2022 ರ ಕಾಯ್ದೆಯನ್ನು ಶೆಡ್ಯೂಲ್ 9 ಗೆ ಸೇರಿಸುವ ಮೂಲಕ ಸಮುದಾಯಗಳಿಗೆ ಸಂವಿಧಾನ ಬದ್ಧ ನ್ಯಾಯ ದೊರಕಿಸಿಕೊಡಬೇಕು.ನಿರ್ಲಕ್ಷ ಧೋರಣೆ ಅನುಸರಿಸಿದರೆ ಯಾವುದೇ ಸ್ವರೂಪದ ಹೋರಾಟಕ್ಕೂ ವಾಲ್ಮೀಕಿ ನಾಯಕ ಸಮಾಜ ಸಿದ್ಧ ಎಂದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಕರ್ನಾಟಕ ರಾಜ್ಯ ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವೇದಿಕೆ ಅಧ್ಯಕ್ಷರಾದ ವಿ.ಎಸ್. ಉಗ್ರಪ್ಪ ಎಚ್ಚರಿಕೆ ನೀಡಿದ್ದಾರೆ.

ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡುತ್ತಾ, ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಇರುವ ಮೀಸಲಾತಿ ಪ್ರಮಾಣವನ್ನು ಕಳೆದ ಬಿಜೆಪಿ ಸರ್ಕಾರದಲ್ಲಿಯೇ ಶೇ 56 ಕ್ಕೆ ಹೆಚ್ಚಿಸಲಾಗಿತ್ತು. ಈ ಬಾರಿಯ ಬೆಳಗಾವಿ ಅಧಿವೇಶನದಲ್ಲಿಯೂ ಕೂಡ ರಾಜ್ಯ ಸರ್ಕಾರ ಇದನ್ನು ಒಪ್ಪಿ ಕೇಂದ್ರಕ್ಕೆ ಮನವಿ ಸಲ್ಲಿಸಿತ್ತು. ಆದರೆ ಈ ವಿಚಾರದಲ್ಲಿ ಸಂವಿಧಾನದ 9ನೇ ಪರಿಚ್ಛೇದಕ್ಕೆ ತಿದ್ದುಪಡಿ ಮಾಡದ ಹೊರತು ಅದು ಜಾರಿ ಅಸಾಧ್ಯ. ಈ ಹಿನ್ನಲೆಯಲ್ಲಿ ಪರಿಶಿಷ್ಟ ಜಾತಿ, ಪಂಗಡ ಅನ್ಯಾಯವಾದಂತಾಗುತ್ತದೆ. ಆದ್ದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇಚ್ಛಾಶಕ್ತಿ ಪ್ರದರ್ಶಿಸಬೇಕು ಎಂದು ಒತ್ತಾಯಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿ ಬಳಿ ಸರ್ವಪಕ್ಷ ನಿಯೋಗ ಕರೆದುಕೊಂಡು ಹೋಗಿ ಸಂವಿಧಾನದ 9ನೇ ಪರಿಚ್ಛೇದಕ್ಕೆ ತಿದ್ದುಪಡಿ ತರಲು ಕೇಂದ್ರದ ಮೇಲೆ ಒತ್ತಡ ಹೇರಬೇಕು ಎಂದು ಆಗ್ರಹಿಸಿದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಹಿಂದುಳಿದವರ ಬಗ್ಗೆ ಕಾಳಜಿ ಇದ್ದರೆ ತಕ್ಷಣವೇ ಈ ಬಗ್ಗೆ ಕ್ರಮ ಕೈಗೊಳ್ಳಬೇಕು. ಮೀಸಲಾತಿ ಎಂಬುದು ಭಿಕ್ಷೆಯಲ್ಲ. ಅದು ನಮ್ಮ ಹಕ್ಕು ಎಂದರು.ಸ್ವಾತಂತ್ರ ಬಂದು 78 ವರ್ಷಗಳು ಗತಿಸಿದರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ಶೈಕ್ಷಣಿಕ ಮತ್ತು ರಾಜಕೀಯ ಕ್ಷೇತ್ರದಿಂದ ವಂಚಿತರಾಗಿದ್ದಾರೆ. ಈ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರ ಆತ್ಮಅವಲೋಕನ ಮಾಡಿಕೊಳ್ಳಬೇಕೆಂದು ಎಂದರು.

3 ನೇ ಪುಟಕ್ಕೆ

ದಿ.31: ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ - ಶಾವಂತಗೇರಿ


ರಾಯಚೂರು, ಮಾ.22-

ಕರ್ನಾಟಕ ರಾಜ್ಯ ಸರ್ಕಾರಿ ನೌಕರ ಸಂಘ ಹಾಗೂ ಸಾವಿತ್ರಿಬಾಯಿ ಫುಲೆ ಶಿಕ್ಷಕಿರ ಸಂಘ ಇವರ ಸಂಯುಕ್ತಾಶ್ರಯದಲ್ಲಿ ದಿ.31 ರಂದು ಸಂಜೆ 4 ಗಂಟೆಗೆ ನಗರದ ಪಂಡಿತ್ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಆಯೋಜಿಸಲಾಗಿದೆ ಎಂದು ಜಿಲ್ಲಾಧ್ಯಕ್ಷರಾದ ಕೃಷ್ಣ ಶಾವಂತಗೇರಿ ಅವರು ಹೇಳಿದರು.

ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡುತ್ತಾ, ಮಹಿಳೆಯರಲ್ಲಿ ಆತ್ಮವಿಶ್ವಾಸ ಕ್ರೀಡೆ ಚಟುವಟಿಕೆ ಭಾಗವಹಿಸುವಿಕೆ ಹಾಗೂ ಒತ್ತಡ ನಿವಾರಣೆಯಿಂದ ಹೊರ ತರುವ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

3 ನೇ ಪುಟಕ್ಕೆ





ನಲುಗಿದ ಇರಾನ್ 30 ಗಂಟೆಗಳಲ್ಲಿ 2,000ಕ್ಕೂ ಹೆಚ್ಚು ಬಾಂಬ್ ದಾಳಿ

ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ಮೇಲೆ ದಾಳಿ ನಡೆಸುತ್ತಲ್ಲಿದ್ದು, ಇರಾನ್ ಕೂಡಾ ಪ್ರತಿದಾಳಿ ಮುಂದುವರೆಸಿದೆ. ಶನಿವಾರ ಬೆಳಿಗ್ಗೆಯಿಂದ 30 ಗಂಟೆಗಳ ಅವಧಿಯಲ್ಲಿ ಇರಾನ್ ಮೇಲೆ ಇಸ್ರೇಲ್ 2,000ಕ್ಕೂ ಅಧಿಕ ಬಾಂಬ್ ದಾಳಿಗಳನ್ನು ನಡೆಸಿದೆ ಎಂದು ಇಸ್ರೇಲ್ ರಕ್ಷಣಾ ಪಡೆಗಳು (ಐಡಿಎಫ್) ಭಾನುವಾರ ರಾತ್ರಿ ಹೇಳಿದೆ.

ಇರಾನ್ ಮೇಲೆ 2025ರ ಜೂನ್‌ನಲ್ಲಿ ಇಸ್ರೇಲ್ ಆರು ದಿನಗಳ ಕಾಲ ಎಷ್ಟು ಬಾಂಬ್ ದಾಳಿ ನಡೆಸಿದೆಯೋ, ಅಷ್ಟು ಬಾಂಬ್ ದಾಳಿಯನ್ನು ಈ ಬಾರಿ ಒಂದು ದಿನದಲ್ಲೇ ನಡೆಸಿದೆ. ಆದ್ದರಿಂದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ 2025ರ ಜೂನ್‌ಗಿಂತ ಅತಿ ಶೀಘ್ರವೇ ಕಾರ್ಯಾಚರಣೆಯನ್ನು ನಿಲ್ಲಿಸಬಹುದು ಎಂದು ಹೇಳಿಕೊಂಡಿದ್ದಾರೆ.

3 ನೇ ಪುಟಕ್ಕೆ

ಆರ್ಥಿಕ ಚೇತರಿಕೆ ಕಂಡ ಎಪಿಎಂಸಿ



ಬಾಗಲಕೋಟೆ,ಮಾ.22-

ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಪ್ರಾಂಗಣದಲ್ಲಿ ಕೇರಳ ಮೂಲದ ಸಂಸ್ಥೆಯೊಂದು ಅರಿಸಿನ ಖರೀದಿ ಕೇಂದ್ರ ಆರಂಭಿಸಿದ್ದರಿಂದ ಸಮಿತಿ ಆರ್ಥಿಕ ಚೇತರಿಕೆ ಕಾಣುತ್ತಿದೆ.

ಬೆಲ್ಲದ ಮಾರುಕಟ್ಟೆ ಎಂದೇ ಪ್ರಸಿದ್ಧಿಯಾಗಿದ್ದ ಎಪಿಎಂಸಿಯು ಸಕ್ಕರೆ ಕಾರ್ಖಾನೆಗಳ ಸ್ಥಾಪನೆಯಿಂದಾಗಿ ವರ್ಷದಿಂದ ವರ್ಷಕ್ಕೆ ಬೆಲ್ಲದ ಉತ್ಪಾದನೆ ಕಡಿಮೆಯಾಗಿ ಬೆಲ್ಲದ ಆವಕ ಕುಂಠಿತಗೊಂಡು ಆರ್ಥಿಕ ಸಂಕಷ್ಟಕ್ಕೆ ಸಿಲುಕಿತ್ತು. ಇದರೊಂದಿಗೆ ಎಪಿಎಂಸಿ ಕಾಯ್ದೆಗೆ ತಿದ್ದುಪಡಿ, ಮಾರುಕಟ್ಟೆ ಪ್ರಾಂಗಣದ ಹೊರಗೆ ಮುಕ್ತ ವಹಿವಾಟಿಗೆ ಅವಕಾಶ ಹಾಗೂ ₹ 100 ಕ್ಕೆ ₹ 1.50 ಇದ್ದ ಸೆಸ್ ಅನ್ನು 60 ಪೈಸೆಗೆ ಇಳಿಸುವ ಮೂಲಕ ಎಪಿಎಂಸಿ ಆದಾಯಕ್ಕೆ ಕೊಕ್ಕೆ ಬಿದ್ದಿತ್ತು.

ಬೆಲ್ಲದ ಆವಕ ಜತೆಗೆ ಮಾರುಕಟ್ಟೆ ಶುಲ್ಕದ ಆದಾಯ ಗಣನೀಯವಾಗಿ ಕಡಿಮೆಯಾಗಿದ್ದರಿಂದ ಮತ್ತೊಂದು ಪ್ರಮುಖ ಉತ್ಪನ್ನವಾದ ಅರಿಸಿನಕ್ಕೆ ಮಾರುಕಟ್ಟೆ ಆರಂಭಕ್ಕೆ ನೂತನ ಆಡಳಿತ ಮಂಡಳಿಯು ಮುಂದಾಗಿತ್ತು. ಆದರೆ, ಅರಿಸಿನ ಮಾರುಕಟ್ಟೆ ಒದಗಿಸಿದರೂ ಅಲ್ಪ ಪ್ರಮಾಣದಲ್ಲಿ ಖರೀದಿಸುವ ಖರೀದಿದಾರರಿಂದ ಉತ್ತಮ ದರ ದೊರೆಯದ ಹಿನ್ನೆಲೆ ರೈತರು ನೆರೆಯ ಮಹಾರಾಷ್ಟ್ರದ ಸಾಂಗ್ಲಿ ಮಾರುಕಟ್ಟೆಗೆ ಅರಿಸಿನ ಕಳುಹಿಸುತ್ತಿದ್ದರು.

ಕೆಲ ರೈತರು ಕೇರಳ ಮೂಲದ ಸಂಸ್ಥೆಗೆ ಬೆಳಗಾವಿ ಜಿಲ್ಲೆಯ ಘಟಪ್ರಭಾ ಗ್ರಾಮದ ಏಜೆಂಟರ ಮೂಲಕ ಅರಿಸಿನವನ್ನು ಮಾರಾಟ ಮಾಡುತ್ತಿರುವ ಸಂಗತಿ ಗಮನಕ್ಕೆ ಬಂದ ತಕ್ಷಣ ಆಡಳಿತ ಮಂಡಳಿಯು ಮಹಾಲಿಂಗಪುರ ಸಮಿತಿಯಲ್ಲಿ ವಹಿವಾಟು ನಡೆಸುವಂತೆ ಸಂಸ್ಥೆಗೆ ಕೋರಿತ್ತು. ಈಗಾಗಲೇ ಹಾವೇರಿ ಜಿಲ್ಲೆಯ ಕೃಷಿ ಮಾರಾಟ ಇಲಾಖೆ ಸಹಾಯಕ ನಿರ್ದೇಶಕರಿಂದ ಪರವಾನಗಿ ಪಡೆದು ರಾಣೆಬೆನ್ನೂರು ಸಮಿತಿ ವ್ಯಾಪ್ತಿಯಲ್ಲಿ ವಹಿವಾಟು ನಡೆಸುತ್ತಿದ್ದು, ಇದೇ ಪರವಾನಗಿಯನ್ನು ಮಹಾಲಿಂಗಪುರ ಸಮಿತಿಯಲ್ಲಿ ಮ್ಯಾಪಿಂಗ್ ಮಾಡಿಕೊಂಡು ವಹಿವಾಟು ನಡೆಸಲು ಕೇರಳ ಮೂಲದ ಸಂಸ್ಥೆಗೆ ಮನವೊಲಿಸಿ ಸಮಿತಿ ಪ್ರಾಂಗಣದಲ್ಲಿ ಅರಿಸಿನ ಖರೀದಿ ಕೇಂದ್ರ ಆರಂಭಿಸಲು ಅನುಮತಿ ನೀಡಿದೆ. ಪ್ರಾಂಗಣದಲ್ಲಿ ಐದು ವರ್ಷಗಳಿಂದ ಖಾಲಿ ಬಿದ್ದಿದ್ದ 1 ಸಾವಿರ ಎಂ.ಟಿ ಸಾಮರ್ಥ್ಯದ ಗೋದಾಮಿನಲ್ಲಿ ಕೇರಳ ಮೂಲದ ಸಂಸ್ಥೆ ಮಾ.2 ರಿಂದ ಅರಿಸಿನ ಖರೀದಿ ಕೇಂದ್ರ ಆರಂಭಿಸಿದೆ. ತಿಂಗಳಿಗೆ ₹ 83,234 (ಶೇ 18 ರಂತೆ ಜಿಎಸ್‌ಟಿ ಪ್ರತ್ಯೇಕ) 11 ತಿಂಗಳ ಅವಧಿಗೆ ಈ ಗೋದಾಮು ಪಡೆದಿದೆ.

ಎಪಿಎಂಸಿಯಲ್ಲಿ ದೊರೆತ ಮಾಹಿತಿ ಪ್ರಕಾರ ಕೇರಳ ಮೂಲದ ಸಂಸ್ಥೆಯು ಮಾ.2 ರಿಂದ ಮಾ.16 ರವರೆಗೆ 55 ರೈತರಿಂದ 4549.20 ಕ್ವಿಂಟಲ್ ಅರಿಸಿನ ಖರೀದಿಸಿದ್ದು, ರೈತರಿಗೆ ₹ 5,87,10,190 ಹಾಗೂ ಸೆಸ್ (ಶುಲ್ಕ) ರೂಪದಲ್ಲಿ ಎಪಿಎಂಸಿಗೆ ₹ 3,52,261 ಪಾವತಿ ಮಾಡಿದೆ. ಕ್ವಿಂಟಾಲ್ ಅರಿಸಿನಕ್ಕೆ ಕನಿಷ್ಠ ₹ 12 ಸಾವಿರದಿಂದ ಗರಿಷ್ಠ ₹ 13,056 ದರದಲ್ಲಿ ಸಂಸ್ಥೆ ಖರೀದಿ ಮಾಡಿದೆ. ಕಳೆದ ಐದು ವರ್ಷಗಳಿಂದ ನಿಶ್ಚಿತ ಗುರಿ ಸಾಧಿಸದೆ ಮಾರುಕಟ್ಟೆ ನಿಭಾಯಿಸಲು ಹೊಯ್ದಾಡುತ್ತಿದ್ದ ಎಪಿಎಂಸಿ ಇದೀಗ ಆರ್ಥಿಕವಾಗಿ ಚೇತರಿಕೆ ಕಾಣುವಂತಾಗಿದೆ.

ಈಶ್ವರ ದೇವಸ್ಥಾನ ಸಮಿತಿ ವತಿಯಿಂದ ಶ್ರೀಶೈಲ ಪಾದಯಾತ್ರಿಗಳಿಗೆ ಅನ್ನಸಂತರ್ಪಣೆ, ಉಚಿತ ಆರೋಗ್ಯ ತಪಾಸಣೆ



ರಾಯಚೂರು.ಮಾ.22-

ನಗರದ ಈಶ್ವರ ದೇವಸ್ಥಾನ ಸೇವಾ ಸಮಿತಿ, ನಗರದ ಸಂಘ ಸಂಸ್ಥೆಗಳು ಹಾಗೂ ವಿವಿದ ಮಹಾದಾನಿಗಳ ಸಹಭಾಗಿತ್ವದಲ್ಲಿ ನಗರದ ಹೊರ ವಲಯದ ಲಿಂಗಸುಗೂರ ರಸ್ತೆಯಲ್ಲಿರುವ ಜಿಡ್ಡಾ ಯಲ್ಲಾಲಿಂಗೇಶ್ವರ ಶ್ರೀಮಠದ ಆವರಣದಲ್ಲಿ ಶ್ರೀಶೈಲ ಮಲ್ಲಿಕಾರ್ಜುನ ದರ್ಶನ ಪಡೆದು ಮರಳಿ ಬರುವ ಸಹಸ್ರಾರು ಭಕ್ತರಿಗೆ 4ನೇ ವರ್ಷದ ಮಹಾ ಪ್ರಸಾದ ಹಾಗೂ ಉಚಿತ ಆರೋಗ್ಯ ತಪಾಸಣೆ, ಮಾತ್ರೆ, ಇಂಜಕ್ಷನ್ ಉಚಿತ ಕ್ರಮವನ್ನು ಈಶ್ವರ ದೇವಸ್ಥಾನದ ಅಧ್ಯಕ್ಷರು, ಅಖಿಲ ಭಾರತ ವೀರಶೈವ ಲಿಂಗಾ ಯತ ಮಹಾಸಭಾ ಜಿಲ್ಲಾಧ್ಯಕ್ಷರಾದ ಚಂದ್ರಶೇಖರ ಪಾಟೀಲ ಮಿರ್ಜಾಪೂರ ಹಾಗೂ ದೇವಸ್ಥಾನದ ಸರ್ವ ಪದಾಧಿಕಾರಿ ಗಳವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿತ್ತು.

ದಿ. 19 ರಂದು ಸಾಯಂಕಾಲ ಗಂಟೆಗೆ ಪ್ರಾರಂಭವಾದ ದಾಸೋಹದದ ದಿವ್ಯ ಸಾನಿಧ್ಯ ವಹಿಸಿಸಿದ್ದ ಕಿಲ್ಲೇಹನ್ನರದ ಶ್ರೀ ಶಾಂತಮಲ್ಲ ಶಿವಾಚಾರ್ಯರು, ಸೋಮವಾರಪೇಟೆ ಹಿರೇಮಠದ ಶ್ರೀ ಅಭಿನವ ರಾಚೋಟಿ ಶಿವಾಚಾರ್ಯ ಮಹಾಸ್ವಾಮಿಗಳು, ಮಂಗಳವಾರಪೇಟೆ ಹಿರೇಮಠದ ಶ್ರೀ ವೀರ ಸಂಗಮೇ ಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ಮಿಟ್ಟಮಲ್ಕಾಪುರ ಶಾಂತಾಶ್ರಮದ ಶ್ರೀ ನಿಜಾನಂದ ಸ್ವಾಮಿಜಿಯವರು ವಹಿಸಿ ದ್ದರು.

ಸರ್ವ ಶ್ರೀಗಳು ಮತ್ತು ರಾಯಚೂರು,

ಯಾದಗಿರಿ ಸಂಸದರಾದ ಜಿ. ಕುಮಾರ ನಾಯಕರವರು ಮಹಾ ಪ್ರಸಾದವನ್ನು ವಿತರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಆರೋಗ್ಯ ತಪಾಸಣೆಯ ಸೇವೆ ಯನ್ನು ಎಸ್.ಎಲ್. ಕೇಶವರೆಡ್ಡಿ, ಬಸವ ರಾಜ ಎಂ. ಪಾಟೀಲ ಹಾಗೂ ರಾಜೇಂದ್ರ ಶಿವಾಳೆ ಗಿಜ್ರನ್ ರಾಯಚೂರು ಹಾಗೂ ಡಿ.ಹೆಚ್.ಓ.ನಲ್ಲಿ ಔಷಧ ವಿತರಕರಾದ ಸೌಮ್ಯ ಅವರ ನೇತೃತ್ವದಲ್ಲಿ ಪೂರ್ಣಿಮಾ ಆಯುರ್ವೇದಿಕ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ರಿಮ್ಸ್ ಆಸ್ಪತ್ರೆ, ನವೋದಯ ಆಸ್ಪತ್ರೆ, ಜಿಲ್ಲಾ ಆರೋಗ್ಯ ಕೇಂದ್ರ, ಬಾಲ್ಕಿ ಆಸ್ಪತ್ರೆ ಹಾಗೂ ಇನ್ನಿತರ ಆಸ್ಪತ್ರೆಗಳ ಸಹಭಾಗಿತ್ವದಲ್ಲಿ ಹಮ್ಮಿಕೊ ಳ್ಳಲಾಗಿತ್ತು.

ಪ್ರಸಾದವನ್ನು ವಿತರಿಸಿ ಧರ್ಮ ಸಂದೇಶ ನೀಡಿದ ಕಿಲ್ಲೇಬೃಹನ್ಮಠದ ಶ್ರೀಗಳು ನಗರದಲ್ಲಿ ಇತ್ತೀಚೆಗೆ ಈಶ್ವರ

ದೇವಸ್ಥಾನದ ಸೇವಾ ಸಮಿತಿಯವರು ದೇವಸ್ಥಾನವನ್ನು ಮುನ್ನಡೆಸುವುದಲ್ಲದೇ ಸಮಾಜ ಮುಖಿ ಕಾರ್ಯಗಳು ಮತ್ತು ವರ್ಷವಿಡೀ ಸಾಂಸ್ಕೃತಿಕ ಕಾರ್ಯಕ್ರಮನ ಳನ್ನು ಹಮ್ಮಿಕೊಂಡು ಬಡಾವಣೆಯ ಮತ್ತು ನಗರದ ಜನತೆಯನ್ನು ಸಹೋದ ರತ್ನ ಸೌಹಾರ್ದತೆಯಲ್ಲಿ ಕೊಂಡೊಯ್ಯುತ್ತಿ ರುವ ನಮ್ಮ ಮಹಾಸಭಾ ಜಿಲ್ಲಾಧ್ಯಕ್ಷರಾದ ಚಂದ್ರಶೇಖರ ಪಾಟೀಲ ಮಿರ್ಜಾಪೂರ ವರ ಮತ್ತು ದೇವಸ್ಥಾನದ ಸರ್ವ ಪದಾಧಿಕಾರಿಗಳವರ ಕಾರ್ಯ ವೈಖರಿ ಸರ್ವರೂ ಮೆಚ್ಚುವಂತಾದ್ದು.

ಈ ಮಾತನ್ನ ಮತ್ತೆ ಮತ್ತೆ ಯಾಕೆ ಹೇಳಬೇಕಾಗುತ್ತೆ ಎಂದರೆ ಈ ದೇವಸ್ಥಾನದ ಸಮಿತಿಯವರು ದೊಡ್ಡ ದೊಡ್ಡ ಉದ್ಯಮಿಗಳು ಮತ್ತು ಸರಕಾರಿ ಸೇವೆ ಸಲ್ಲಿಸುವವರು ಹಾಗೂ ಕೆಲವರು ಸರಕಾರಿ ಸೇವೆಯಲ್ಲಿ ನಿವೃತ್ತರಾದವರು ಇವರು ಮನಸ್ಸು ಮಾಡಿದರೆ ಮನೆಯಲ್ಲಿ

ಅರಾಮವಾಗಿ ಕುಳಿತು ಜೀವನ ನಡೆಸ ಬಲ್ಲವರಾಗಿದ್ದಾರೆ.

ಆದರೂ ಸಹಿತ ಇವರ ಮನಸ್ಸು ಹೇಗಿದೆ ಎಂದರೆ ಬರುವಾಗ ಏನೂ ತಂದಿಲ್ಲ ಹೋಗುವಾಗಲೂ ಕೊಂಡೊಯ್ಯುವದಿಲ್ಲ ಇರುವಾಗಲೇ ಸಾರ್ವಜನಿಕರಿಗೆ ನಮ್ಮ ಅಲ್ಪ ಸೇವೆ ಸಲ್ಲಿಸಿದರೆ ನಮಗೆ ಆರೋಗ್ಯ ನೆಮ್ಮದಿ ಸಿಕ್ಕೀತು ಎಂಬ ಸದುದ್ದೇಶದಿಂದ ಇಂಥಹ ಮಹಾ ದಾಸೋಹ ಕಾರ್ಯವನ್ನು ಹಮ್ಮಿಕೊಂಡಿರೆಯವುದು ಭಗವಂತನಿಗೆ ಸಲ್ಲುತ್ತದೆ ಈ ಕಾರ್ಯವು ನಿರಂತರವಾಗಿ ಸಾಗು ತ್ತಿರಲಿ ಎಂಬುದು ನಮ್ಮ ಆಶೀರ್ವಾದ ಎಂದು ನುಡಿದರು.

ನಂತರ ಧರ್ಮ ಸಂದೇಶ ನೀಡಿದ ಅಭಿನವ ಶ್ರೀಗಳು ಈಶ್ವರ ದೇವಸ್ಥಾನದ ಸಮಾಜ ಮುಖಿ ಕಾರ್ಯಗಳು ಕೇಂದ್ರ ಸರಕಾರದವರೆಗೂ ತಲುಪಿ ಪ್ರದಾನ ಮಂತ್ರಿಗಳವರಿಂದ ಅಭಿನಂದನೆ ನುಡಿ

ಗಳನ್ನು ಹೇಳಿಸಿಕೊಳ್ಳುವ ಮಟ್ಟಿಗೆ ಬೆಳೆದಿದೆ ಎಂದರೆ ಸಂತೋಷ ಎಂದು ನುಡಿದರು.

ನಂತರ ಮಾತನಾಡಿದ ಸಂಸದರಾದ ಜಿ. ಕುಮಾರ ನಾಯಕರವರು ಸರಕಾರ ಗಳು ಮಾಡಲಾಗದ ಕಾರ್ಯಗಳನ್ನು ಇಂದು ಈಶ್ವರ ದೇವಸ್ಥಾನ ಮತ್ತು ಸಂಘ ಸಂಸ್ಥೆಗಳು ಮಾಡುತ್ತಿರುವುದು ಶ್ಲಾಘನೀ ಯವಾಗಿದೆ.

ಸುಮಾರ 30 ರಿಂದ 35 ಸಾವಿರ ಜನತೆಗೆ ತುಂಬಾ ಅಚ್ಚುಕಟ್ಟಾಗಿ ಸರ್ವ ಜನತೆಗೆ ಕಿಂಚಿತ್ತೂ ತೊಂದರೆಯಾ ಗದಂತೆ ಉಚಿತ ಪ್ರಸಾದ ಮತ್ತು ಆರೋಗ್ಯ ತಪಾಸಣೆ ಮಾತ್ರೆ ವಿತರಣೆ ಕಾರ್ಯ ಬಹು ದೊಡ್ಡ ಕಾರ್ಯವಾಗಿದೆ, ನಮ್ಮ ಮಿರ್ಜಾ ಪೂರ ಪಾಟೀಲರು ಮತ್ತು ಅವರ ಸಂಗಡಿ ಗರು ಸಲ್ಲಿಸುವ ಕಾರ್ಯ ಭಗವಂತನಿಗೆ ಪ್ರಿಯವಾಗಿದೆ. ಇಂಥ ವಿಶಾಲವಾದ ಮೈದಾ ನವನ್ನು ಕಲ್ಪಿಸಿಕೊಟ್ಟಂತ ಜಿಡ್ಡಾ ಮಠದ ಶ್ರೀಗಳಿಗೂ ನನ್ನ ಹೃದಯ ಪೂರ್ವಕ ಧನ್ಯವಾದಗಳು ಎಂದು ಹೇಳಿದರು.

ದಿ. 20 ರಂದು ನಗರ ಶಾಸಕರಾದ ಡಾ. ಎಸ್. ಶಿವರಾಜ ಪಾಟೀಲರು ಅತಿಥಿ ಯಾಗಿ ಆಗಮಿಸಿ ಪ್ರಸಾದ ವಿತರಿಸಿ ಮಾತ ನಾಡಿದ ಅವರು ನಗರದ ಹೊರವಲಯ ದಲ್ಲಿ ಈ ದಾಸೋಹ ಮತ್ತು ಆರೋಗ್ಯ ತಪಾಸಣೆಯು ಜಾತ್ರಾ ಸ್ವರೂಪದಲ್ಲಿ ಕಾಣುತ್ತದೆ, ಇಲ್ಲಿ ಅನ್ನಪೂರ್ಣೇಶ್ವರಿ ಮತ್ತು ಧನ್ವಂತರಿ ಮಾತೆಯರ ಜೋಡು ನನ್ನ ಭಾವನೆಯಾಗಿದೆ. ಮಿರ್ಜಾಪೂರ ಪಾಟೀಲರ ಕಾರ್ಯ ಶ್ಲಾಘನೀಯವಾ ದುದು ಎಂದು ಹೇಳಿದರು.

ಶ್ರೀ ನಿಜಾನಂದ ಸ್ವಾಮಿಗಳು ಮಾತ ನಾಡಿ, ಅನ್ನ ದಾಸೋಹ ಮತ್ತು ಆರೋಗ್ಯ ದಾಸೋಹ ಹಮ್ಮಿಕೊಂಡ ಸರ್ವರಿಗೂ ಶ್ರೀಶೈಲ ಮಲ್ಲಿಕಾರ್ಜುನ ಒಳ್ಳೇದು ಮಾಡಲಿ ಎಂದು ಹೇಳಿದರು.

ನಂತರ ರವಿ ಬೋಸರಾಜ ಮಾತನಾಡಿ ನಗರದ ಈಶ್ವರ ದೇವಸ್ಥಾನವು ನಗರದಲ್ಲಿ ಧರ್ಮ ಕಾರ್ಯಗಳ ಮೂಲಕ ಸರ್ವರನ್ನೂ ಆಧ್ಯಾತ್ಮಿಕ ಮಾರ್ಗದಲ್ಲಿ ಕೊಂಡೊ ಯ್ಯುತ್ತಿರುವುದು ಸಂತೋಷ ವಿಷಯ ಎಂದು ಹೇಳಿದರು.

ಕಲಬುರಗಿ ಪೀಠದ ಕರ್ನಾಟಕ ರಾಜ್ಯ ಮಾಹಿತಿ ಆಯೋಗದ ಆಯುಕ್ತ ರಾದ ಬಿ. ವೆಂಕಟಸಿಂಗ್ ಮಹಾ ಪ್ರಸಾದ ವಿತರ ಣೆಯ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದರು. ಜಿಲ್ಲಾ ವೀರಶೈದ ಲಿಂಗಾಯತ ಸಮಾಜದ ಶರಣ ಬೂಪಾಲ ನಾಡಗೌಡ, ಕೆ. ಶಾಂತಪ್ಪ, ನರಸಿಂಹಲು ಮಾಡಗಿರಿ, ರುದ್ರಪ್ಪ ಅಂಗಡಿಯವರು ಇದ್ದರು.

ಸಾಯಂಕಾಲದ ಸಮಯದಲ್ಲಿ ಆರೋಗ್ಯ ತಪಾಸಣೆಯ ಅಧಿಕಾರಿಗಳು ಮತ್ತು ಸರ್ವ ಹಿರಿಯ ಮಹಿಳೆಯರು ಪ್ರಸಾದ ವಿತರಣೆಯಲ್ಲಿ ಪಾಲ್ಗೊಂಡು ಸೇವೆ ಸಲ್ಲಿಸಿದರು.

ಒಟ್ಟಾರೆಯಾಗಿ ಎರಡು ದಿನಗಳಲ್ಲಿ ಸುಮಾರು 30 ರಿಂದ 35 ಸಾವಿರ ಶ್ರೀಶೈಲ ಭಕ್ತಾಧಿಗಳು ಮಹಾ ಪ್ರಸಾದವನ್ನು ಸ್ವೀಕರಿಸಿ ತಮ್ಮ ತಮ್ಮ ಗ್ರಾಮಗಳಿಗೆ ತೆರಳಿದ್ದಾರೆ.

, , ಸಕ್ರಿ ವಕೀಲರು, ಉದಯಕುಮಾರ ಯಾವ ಲದಿನ್ನಿ, ಪರಮೇಶ್ವರ ಸಾಲಿಮಠ, ಹದ್ದಿ ನಾಳ ಮಲ್ಲನಗೌಡ, ಗಣೇಕಲ ರಾಚನ ಗೌಡ, ಪಾಲಿಬೆಂಚಿ ಶಂಕರಗೌಡ, ಕಲ್ಲಾ ಈರೇಶಪ್ಪ, ಚನ್ನಬಸವ ಇಂಜಿನೀಯರ, ಯಾಪಲದಿನ್ನಿ ಬಸವರಾಜ, ಬಂಡಿ ವಿರು ಪನಗೌಡ, ಸಂಪತಕುಮಾರ, ಆದಿ ನಾರಾಯಣ, ಮರಿಸಿದ್ದಪ್ಪ ಅರವಿ, ಕಲ್ಕಲ ಪರಪ್ಪಗೌಡ, ಕಾಶ್ಮೀರ ಬಸವರಾಜ, ಬಸವರಾಜ ಸ್ವಾಮಿ ಯರಡೋಣಿ, ನರೇಶ ವಕ್ರಾಣಿ, ಬಸವರಾಜ ಬಸವ ಟಿಫನ್, ಗಾರಲದಿನ್ನಿ ತಿಪ್ಪಯ್ಯ ಶೆಟ್ಟಿ, ಅವಿನಾಶ ಶರಣಪ್ಪ, ಡಾ. ನಾಗರಾಜ ಬಾಲ್ಕಿ, ಭೀಮಸೇನರೆಡ್ಡಿ, ಯದ್ದಲದಿನ್ನಿ ಮಲ್ಲಿಕಾರ್ಜುನ ಪಾಟೀಲ, ಸೇರಿದಂತೆ ಇನ್ನಿತರರು ಇದ್ದರು.

ಬಲಿಷ್ಠ ಸಂಘಟನೆ ಕಟ್ಟಲು ಪ್ರಶಿಕ್ಷಣ ವರ್ಗ ಅತ್ಯಗತ್ಯ : ವಿಜಯೆಂದ್ರ



ಶಹಾಬಾದ್,ಮಾ.22-

ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಬಲಿಷ್ಠ ಸಂಘಟನೆ ಕಟ್ಟಲು ಪ್ರಶಿಕ್ಷಣ ವರ್ಗ ಅತ್ಯಗತ್ಯ, ಇಲ್ಲಿ ಪಡೆದ ಶಿಕ್ಷಣದಿಂದ ಸಮಾಜದಲ್ಲಿ ಪ್ರಭಾವಿ ವ್ಯಕ್ತಿಗಳಾಗಲು ಸಾಧ್ಯ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಶಾಸಕ ಬಿ.ವೈ ವಿಜಯೆಂದ್ರ ರವರು ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದರು.

ಅವರು ತಾಲೂಕಿನ ಮಾಲಗತ್ತಿ ಗ್ರಾಮದ ಹಿರೋಡೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ಚಿತ್ತಾಪೂರ(ಮಂಡಲ) ಮತಕ್ಷೇತ್ರದ ವತಿಯಿಂದ ಹಮ್ಮಿಕೊಂಡಿದ್ದ ದೀನದಯಾಳ ಉಪಾಧ್ಯಾಯ ಪ್ರಶಿಕ್ಷಣ ಮಹಾ ಅಭಿಯಾನ-2026ರ ಮಂಡಲ ಮಟ್ಟದ ಸಭೆಯಲ್ಲಿ ಮಾತನಾಡಿದರು.

ಬಿಜೆಪಿ ಪ್ರಶಿಕ್ಷಣ ವರ್ಗವು ಪಕ್ಷದ ಸಿದ್ಧಾಂತ, ನೀತಿಗಳು ಮತ್ತು ಸಂಘಟನಾ ಕೌಶಲ್ಯಗಳನ್ನು ಕಾರ್ಯಕರ್ತರಿಗೆ ಕಲಿಸುವ ಮೂಲಕ, ರಾಷ್ಟ್ರ ನಿರ್ಮಾಣ ಮತ್ತು ಪಕ್ಷದ ಸಂಘಟನೆಯನ್ನು ಬಲಪಡಿಸಲು ನಡೆಸುವ ರಚನಾತ್ಮಕ ತರಬೇತಿ ಕಾರ್ಯಕ್ರಮವಾಗಿದೆ. ದೇಶದಲ್ಲಿ ಬಿಜೆಪಿ ಪಕ್ಷವು ತನ್ನ ಸಿದ್ಧಾಂತ ಹಾಗೂ ಕಾರ್ಯದ ಮೂಲಕ ವಿಭಿನ್ನ ಪಕ್ಷ ಎಂದು ಗುರುತಿಸಿಕೊಂಡಿದೆ ಎಂದರು. ವೇದಿಕೆಯಲ್ಲಿ ಗ್ರಾಮೀಣ ಶಾಸಕ ಬಸವರಾಜ ಮತ್ತಿಮಡು, ಮಾಜಿ ಸಂಸದ ಡಾ. ಉಮೇಶ ಜಾದವ, ವಿಧಾನ ಪರಿಷತ್ ಸದಸ್ಯ ಬಿ. ಜಿ ಪಾಟೀಲ, ಮಾಜಿ ಶಾಸಕರಾದ ದತ್ತಾತ್ರೇಯ ಪಾಟೀಲ, ರಾಜಕುಮಾರ್ ಪಾಟೀಲ, ಮಾಜಿ ಎಂಎಲ್ಸಿ ಅಮರನಾಥ ಪಾಟೀಲ, ಕಾಡಾ ನಿಗಮದ ಮಾಜಿ ಅಧ್ಯಕ್ಷ ಶರಣಪ್ಪ ತಳವಾರ, ಧರ್ಮಣ್ಣ ಇಟಗಾ, ಬಸವರಾಜ ಬೆಣ್ಣೂರ, ಶಶಿಕಲಾ ಟೆಂಗ್ಲಿ, ಶೋಬಾ ಬಾಣಿ ಇದ್ದರು. ಪ್ರಶಿಕ್ಷಣ ವರ್ಗದಲ್ಲಿ ಲಿಂಗಾರೆಡ್ಡಿ ಬಾಸರೆಡ್ಡಿ, ಸೋಮಶೇಖರ ಪಾಟೀಲ, ಚಂದ್ರಶೇಖರ ಆವಂಟಿ, ನಾಗರಾಜ ಹೂಗಾರ, ಶರಣು ಜ್ಯೋತಿ, ಡಾ.ಮಹೇಂದ್ರ ಕೋರಿ, ಸಿದ್ದು ಮಾಲಗತ್ತಿ, ಈಶ್ವರ ಮುಗುಳನಾಗಾ, ವೀಣಾ ನಾರಾಯಣ ಸೇರಿದಂತೆ ಬಿಜೆಪಿ ಪಕ್ಷದ ಚಿತ್ತಾಪೂರ ಮತಕ್ಷೇತ್ರದ ಜವಾಬ್ದಾರಿತ ಪ್ರಮುಖರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ದೋರನಹಳ್ಳಿ ಸಂಭ್ರಮದ ಈದುಲ್ ಫಿತ್ರ್ ಆಚರಣೆ

ಯಾದಗಿರಿ/ ದೋರನಹಳ್ಳಿ : ಪಟ್ಟಣದಲ್ಲಿ ಈದುಲ್ ಫಿತ್ರ್ ಹಬ್ಬವನ್ನು ಅತ್ಯಂತ ಭಕ್ತಿಭಾವ ಮತ್ತು ಸಂಭ್ರಮದಿಂದ ಆಚರಿಸಲಾಯಿತು.

ಒಂದು ತಿಂಗಳ ಉಪವಾಸದ ಬಳಿಕ ಬಂದ ಈ ಹಬ್ಬವು ಪರಸ್ಪರ ಸೌಹಾರ್ದತೆ, ದಾನಧರ್ಮ ಮತ್ತು ಸಹೋದರತ್ವದ ಸಂದೇಶವನ್ನು ಸಾರಿತು. ಹಬ್ಬದ ಅಂಗವಾಗಿ ಮುಂಜಾನೆ ಮಸೀದಿಗಳಲ್ಲಿ ವಿಶೇಷ ನಮಾಝ್ ಸಲ್ಲಿಸಲಾಯಿತು.

ನಂತರ ಪರಸ್ಪರ ''ಈದ್ ಮುಬಾರಕ್'' ಎಂದು ಶುಭಾಶಯ ವಿನಿಮಯ ಮಾಡಿಕೊಂಡರು. ಮನೆಮನೆಗಳಲ್ಲಿ ವಿಶೇಷ ಆಹಾರ ಪದಾರ್ಥಗಳನ್ನು ತಯಾರಿಸಲಾಗಿತ್ತು. ಶೀರ್ ಖುರ್ಮಾ, ಬಿರಿಯಾನಿ ಸೇರಿದಂತೆ ವಿವಿಧ ಸಿಹಿ ಮತ್ತು ಖಾರದ ವಾಂಛಿತ ತಿನಿಸುಗಳನ್ನು ಸವಿದರು. ಸ್ನೇಹಿತರು, ಬಂಧುಗಳು ಮನೆಗಳಿಗೆ ಭೇಟಿ ನೀಡಿ ಹಬ್ಬದ ಸಂಭ್ರಮವನ್ನು ಹೆಚ್ಚಿಸಿದರು.

ಪಟ್ಟಣದ ಜನಪ್ರತಿನಿಧಿಗಳು, ವಿವಿಧ ಸಂಘಟನೆಗಳ ಮುಖಂಡರು ಈದುಲ್ ಫಿತ್ರ್ ಹಬ್ಬದ ಶುಭಾಶಯಗಳನ್ನು ಕೋರಿದರು. ಕೆಲವರು ಮಸೀದಿಗಳಿಗೆ ಭೇಟಿ ನೀಡಿ ಹಬ್ಬದ ಸಂಭ್ರಮದಲ್ಲಿ ಪಾಲ್ಗೊಂಡರು.

ಸೌಹಾರ್ದತೆ, ಸಹೋದರತ್ವ ಮತ್ತು ಮಾನವೀಯ ಮೌಲ್ಯಗಳ ಸಂದೇಶವನ್ನು ಸಾರಿದ ಹಬ್ಬವಾಗಿ ಅರ್ಥಪೂರ್ಣವಾಗಿ ಆಚರಿಸಲ್ಪಟ್ಟಿತು.

ಶಾದಿ ಮಹಲ್ ನಿರ್ಮಾಣಕ್ಕೆ ಶಾಸಕ ಜೆ.ಎನ್.ಗಣೇಶ ಅವರಿಂದ ಭೂಮಿಪೂಜೆ



ಬಳ್ಳಾರಿ/ಕಂಪ್ಲಿ.ಮಾ.22-

ಪಟ್ಟಣದ ಹೊಸಪೇಟೆ ಬೈಪಾಸ್ ರಸ್ತೆಯ ಈದ್ಗಾ ಮೈದಾನ ಸಮೀಪ, 2025-26ನೇ ಸಾಲಿನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಯೋಜನೆಯಡಿ ಸುಮಾರು 1 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುವ ಶಾದಿ ಮಹಲ್ ಕಟ್ಟಡ ಕಾಮಗಾರಿಗೆ ಶಾಸಕ ಜೆ.ಎನ್.ಗಣೇಶ ಅವರು ಶನಿವಾರ ಭೂಮಿಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕಂಪ್ಲಿ ಕ್ಷೇತ್ರದ ಕಂಪ್ಲಿ, ಎಮ್ಮಿಗನೂರು, ಕಗ್ಗಲ್ ಹಾಗೂ ಗೆಣಿಕಿಹಾಳ್ ಗ್ರಾಮಗಳಲ್ಲಿ ತಲಾ 1 ಕೋಟಿ ರೂ. ಅನುದಾನದಲ್ಲಿ ಶಾದಿ ಮಹಲ್ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ ಎಂದರು. ಜೊತೆಗೆ, ತಲಾ 33 ಲಕ್ಷ ರೂ. ವೆಚ್ಚದಲ್ಲಿ 8 ಖಬರಸ್ತಾನ್‌ಗಳ ಅಭಿವೃದ್ಧಿಗೆ ಒಟ್ಟು 2.64 ಕೋಟಿ ರೂ. ಅನುದಾನ ಮೀಸಲಿಟ್ಟು ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದು ತಿಳಿಸಿದರು.

ಕಂಪ್ಲಿಯ ಸಕ್ಕರೆ ಕಾರ್ಖಾನೆ ಸಮೀಪದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಬಳಿ ಮೌಲಾನ ಆಜಾದ್ ಶಾಲೆಯ ನಿರ್ಮಾಣ ಕಾಮಗಾರಿ ಕೂಡ ಈಗಾಗಲೇ ಪ್ರಾರಂಭವಾಗಿದ್ದು, ಇದರಿಂದ ಸ್ಥಳೀಯರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಸೈಯ ದ್ ಮೈನುದ್ದೀನ್ ಖಾದ್ರಿ, ಸೈಯದ್ ಅಶ್ಫಕ್, ಡಾ. ನೂರ ಮುಹಮ್ಮದ್ ಖಾದ್ರಿ, ಎಪಿಎಂಸಿ ಅಧ್ಯಕ್ಷ ಹಬೀಬ್ ರೆಹಮಾನ್, ಬ್ಲಾಕ್ ಅಧ್ಯಕ್ಷ ಕೆ. ಶ್ರೀನಿವಾಸರಾವ್ ಸೇರಿದಂತೆ ಉಪಸ್ಥಿತರಿದ್ದರು.



ಉತ್ತಮ ಮಳೆ, ಬೆಳೆಗೆ ಪ್ರಾರ್ಥನೆ

ಬಾಗಲಕೋಟೆ ,ಮಾ.22-

ಈದ್ಗಾ ಮೈದಾನದಲ್ಲಿ ಸಾವಿರಾರು ಮುಸ್ಲಿಂ ಬಾಂಧವರು ಪ್ರಾರ್ಥನೆ ಸಲ್ಲಿಸಿ ನಂತರ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು. ಹಬ್ಬದ ಮೂಲಕ ಸಮಾಜದಲ್ಲಿ ಶಾಂತಿ, ಸೌಹಾರ್ದದ ವಾತಾವರಣ ನಿರ್ಮಾಣವಾಗಲಿ, ರಾಜ್ಯದಲ್ಲಿ ಉತ್ತಮ ಮಳೆ, ಬೆಳೆ ಬರಲಿ, ಎಲ್ಲರೂ ಪರಸ್ಪರ ಸಹೊದರತ್ವ ಭಾವದಿಂದ ಜೀವನ ನಡೆಸಲಿ ಎಂದು ಪ್ರಾರ್ಥಿಸಿದರು.

ಮೌಲಾನಾ ಇಲಿಯಾಸ್, ಇನಾಮದಾರ, ಮೌಲಾನಾ ಇಕ್ಬಾಲ್ ನಗಾರ್ಚಿ, ಹುಸೇನ ತುಕಾನಟ್ಟಿ, ಐ.ಎಚ್.ಅಂಬಿ, ಅಂಜುಮನ್ ಸಂಸ್ಥೆಯ ಅಧ್ಯಕ್ಷ ಬಿಲಾಲ್ ಬಾಲದಾರ, ಕಾಂಗ್ರೆಸ್ ಯುವ ನಾಯಕ ವಿನಯ್ ತಿಮ್ಮಾಪುರ, ಎಸ್.ಬಿ, ಹುಬ್ಬಳ್ಳಿ, ಬಾದಷ ರಾಮದುರ್ಗ, ನಗರಸಭೆ ಮಾಜಿ ಅಧ್ಯಕ್ಷ ಮಂಜುನಾಥ ಮಾನೆ, ಆರೀಫ್ ಪಠಾಣ ಪಾಲ್ಗೊಂಡಿದ್ದರು.

ಸಿರವಾರ: ಸೌಹಾರ್ದತೆ,ಸಡಗರದ ಈದ್ ಉಲ್ ಫಿತ್ರ್ ಆಚರಣೆ

ಸಿರವಾರ,ಮಾ.22-

ಪಟ್ಟಣದಲ್ಲಿ ಇಂದು ಮುಸ್ಲಿಂ ಬಾಂಧವರು ಅತ್ಯಂತ ಸಡಗರ-ಸಂಭ್ರಮದಿಂದ ಈದ್ ಉಲ್ ಫಿತರ್ (ರಂಜಾನ್) ಹಬ್ಬವನ್ನು ಆಚರಿಸಿದರು. ಒಂದು ತಿಂಗಳ ಕಾಲ ಪವಿತ್ರ ರಂಜಾನ್ ಉಪವಾಸ ಕೈಗೊಂಡಿದ್ದ ಭಕ್ತಾದಿಗಳು ಇಂದು ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡು ಸೌಹಾರ್ದತೆಯ ಸಂದೇಶ ಸಾರಿದರು.

ಸಾಮೂಹಿಕ ನಮಾಜ್: ಪಟ್ಟಣದ ಪ್ರಮುಖ ಈದ್ಗಾ ಮೈದಾನದಲ್ಲಿ ಇಂದು ಮುಂಜಾನೆ ಸಾವಿರಾರು ಮುಸ್ಲಿಂ ಬಾಂಧವರು ಒಗ್ಗೂಡಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಮೌಲ್ವಿಗಳು ವಿಶ್ವ ಶಾಂತಿ ಮತ್ತು ಸಮೃದ್ಧಿಗಾಗಿ ದುವಾ (ಪ್ರಾರ್ಥನೆ) ಮಾಡಿದರು.

ಶುಭಾಶಯಗಳ ವಿನಿಮಯ: ನಮಾಜ್ ನಂತರ ಪರಸ್ಪರ ಅಪ್ಪಿಕೊಂಡು ಈದ್ ಮುಬಾರಕ್ ಎನ್ನುತ್ತಾ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡ ದೃಶ್ಯಗಳು ಕಂಡುಬಂದವು. ಮಕ್ಕಳು ಹೊಸ ಬಟ್ಟೆ ಧರಿಸಿ ಸಂಭ್ರಮಿಸಿದರು.

ಭಾವೈಕ್ಯತೆಯ ಸಂಕೇತ: ಹಬ್ಬದ ಪ್ರಯುಕ್ತ ವಿವಿಧ ಧರ್ಮಗಳ ಮುಖಂಡರು ಮತ್ತು ರಾಜಕೀಯ ನಾಯಕರು ಈದ್ಗಾ ಮೈದಾನಕ್ಕೆ ಭೇಟಿ ನೀಡಿ ಮುಸ್ಲಿಂ ಬಾಂಧವರಿಗೆ ಶುಭ ಕೋರಿದರು. ಇದು ಪಟ್ಟಣದ ಕೋಮು ಸೌಹಾರ್ದತೆಗೆ ಸಾಕ್ಷಿಯಾಯಿತು. ಸಿಹಿ ಹಂಚಿಕೆ: ಪ್ರತಿಯೊಬ್ಬರ ಮನೆಯಲ್ಲೂ ವಿಶೇಷವಾಗಿ 'ಶೀರ್ ಕುಮಾರ್' ತಯಾರಿಸಲಾಗಿತ್ತು. ಸ್ನೇಹಿತರು ಮತ್ತು ನೆರೆಹೊರೆಯವರನ್ನು ಮನೆಗೆ ಕರೆದು ಸಿಹಿ ಉಣಬಡಿಸುವ ಮೂಲಕ ಹಬ್ಬದ ಸಡಗರವನ್ನು ಹಂಚಿಕೊಂಡರು.


ಪೊಲೀಸ್ ಬಂದೋಬಸ್ತ್: ಯಾವುದೇ ಅಹಿತಕರ ಘಟನೆ ನಡೆಯದಂತೆ ಮತ್ತು ಸುಗಮ ಸಂಚಾರಕ್ಕಾಗಿ ಸಿರವಾರ ಪೊಲೀಸ್ ಇಲಾಖೆಯಿಂದ ಬಿಗಿ ಬಂದೋಬಸ್ತ್ ನಿಯೋಜಿಸಲಾಗಿತ್ತು. ಮೈದಾನದ ಸುತ್ತಮುತ್ತ ಶಾಂತಿಯುತ ವಾತಾವರಣ ನೆಲೆಸಿತ್ತು.

ತ್ಯಾಗ ಮತ್ತು ಸಹಬಾಳ್ವೆಯ ಸಂಕೇತವಾದ ರಂಜಾನ್ ಹಬ್ಬವು ಸಮಾಜದಲ್ಲಿ ಪ್ರೀತಿ ಮತ್ತು ಸಹೋದರತೆಯನ್ನು ಮತ್ತಷ್ಟು ಗಟ್ಟಿಗೊಳಿಸಲಿ. -ಎಂದು ಭಾರತೀಯ ಮಾನವ ಹಕ್ಕುಗಳ ಪರಿಷತ್ ಜಿಲ್ಲಾಧ್ಯಕ್ಷರಾದ ಹಿದಾಯತ್ ದೊಡ್ಡ ಮನೆ ಹೇಳಿದರು



ಟ್ರಾಫಿಕ್ ಸಿಗ್ನಲ್:ಗ್ರೀನ್ ಶೆಡ್ ಅಳವಡಿಸಲು ಅಲ್ಲಪಾಡು ಜಿ.ಗೋಪಾಲರೆಡ್ಡಿ ಮನವಿ

ರಾಯಚೂರು ಮಾ.22-



ಬೇಸಿಗೆ ಹಿನ್ನಲೆಯಲ್ಲಿ ವಾಹನ ಸವಾರರ ಅನುಕೂಲಕ್ಕಾಗಿ ನಗರದ ಪ್ರಮುಖ ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಬಿಸಿಲಿನ ತಾಪದಿಂದ ಪಾರಾಗಲು ಹಸಿರು ನೆರಳಿನ ಪರದೆ ಅಳವಡಿಸಬೇಕೆಂದು ಲೋಕ ಜನಶಕ್ತಿ ಪಾರ್ಟಿ ಜಿಲ್ಲಾಧ್ಯಕ್ಷರಾದ ಅಲ್ಲಪಾಡು ಜಿ.ಗೋಪಾಲ ರೆಡ್ಡಿ ಅವರು ಆಗ್ರಹಿಸಿದ್ದಾರೆ.ಬೇಸಿಗೆಯ ಬಿಸಿಲಿನ ತಾಪದ ಕುರಿತು ನಗರದಲ್ಲಿ ಹೆಚ್ಚುತ್ತಿರುವ ರಾಯಚೂರು ಮಹಾನಗರ ಪಾಲಿಕೆಯ ಮಾನ್ಯ ಆಯುಕ್ತರು ಅವರ ಗಮನ ಸೆಳೆದಿದ್ದಾರೆ. ಪ್ರಸ್ತುತ, ಏಪ್ರಿಲ್-ಮೇ ತಿಂಗಳಲ್ಲಿ ತಾಪಮಾನವು 40 ರಿಂದ 45 ಡಿಗ್ರಿ ಸೆಲ್ಸಿ ಯಸ್ ಗಿಂತ ಹೆಚ್ಚಾಯಾಗುತ್ತದೆ, ವಾಹನ ಸವಾರರು ಟ್ರಾಫಿಕ್ ಸಿಗ್ನಲ್‌ಗಳಲ್ಲಿ ನಿಲ್ಲುವುದು ಕಷ್ಟಕರವಾಗಿದೆ.

ಸಿಗ್ನಲ್‌ಗಳಲ್ಲಿ ದೀರ್ಘಕಾಲ ಕಾಯುವ ವಾಹನ ಸವಾರರು ಮತ್ತುಟ್ರಾಫಿಕ್ ಪೊಲೀಸರು ನೇರ ಸೂರ್ಯನ ಬಿಸಿಲಿಗೆ ಸಿಲುಕಿ ನಿರ್ಜಲೀಕರಣ ಮತ್ತು ಆರೋಗ್ಯದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಪ್ರತಿ ವರ್ಷ ಬೇಸಿಗೆಯಲ್ಲಿ ಶಾಖ ಸಂಬಂಧಿತ ಸವಾಲುಗಳು ತೀವ್ರಗೊಂಡಿವೆ. ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ಇರುವ ಶಾಖದ ಅಲೆಯ ಪರಿಸ್ಥಿತಿಯು ವಾಹನ ಸಂಚಾರದ ಮೇಲೂ ಪರಿಣಾಮ ಬೀರಿದೆ.ಅದರಿಂದ ನಮ್ಮ ನಗರದ ಪ್ರಮುಖ ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಆಶ್ರಯ ನೀಡಲು (ಅತಿ ಹೆಚ್ಚು ವಾಹನ ದಟ್ಟಣೆ ಇರುವ ಕಡೆಗಳಲ್ಲಿ) ತಾತ್ಕಾಲಿಕ ಗ್ರೀನ್ ನೆಟ್ ಶೆಡ್ ಅಳವಡಿಸಲು ದಯವಿಟ್ಟು ಕ್ರಮ ಕೈಗೊಳ್ಳಬೇಕೆಂದು ಕೋರಿದರು.

ಕ್ರಮದಿಂದಾಗುವ ಪ್ರಯೋಜನಗಳು ಬಿಸಿಲಿನ ತಾಪದಿಂದ ಸವಾರರಿಗೆ ತಕ್ಷಣದ ಆರಾಮ. ಟ್ರಾಫಿಕ್ ಪೊಲೀಸ್ ಸಿಬ್ಬಂದಿಯ ಆರೋಗ್ಯ ರಕ್ಷಣೆ. ಸಿಗ್ನಲ್ ಜಿಗಿಯುವುದನ್ನು ತಪ್ಪಿಸಿ ಸುರಕ್ಷತೆ ಹೆಚ್ಚಿಸುವುದು. ಆದ್ದರಿಂದ, ಸಾರ್ವಜನಿಕರ ಹಿತದೃಷ್ಟಿಯಿಂದ, ದಿನ ದಿನಕ್ಕೂ ಬಿಸಿಲು ಹೆಚ್ಚುತ್ತಿರುವುದರಿಂದ ಈ ಗ್ರೀನ್ ಶೆಡ್'ಗಳನ್ನು ಅಳವಡಿಸಲು ಅನುಮತಿ ಮತ್ತು ಆದೇಶ ನೀಡಬೇಕೆಂದು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಒಂದನೇಯ ಪುಟದಿಂದ

ರಷ್ಯಾದಿಂದ ಕಚ್ಚಾತೈಲ, ಅಮೆರಿಕದಿಂದ ಎಲ್‌ಪಿಜಿ ಹೊತ್ತ ಹಡಗುಗಳು ಭಾರತಕ್ಕೆ ಆಗಮನ

ಸುರಕ್ಷಿತವಾಗಿ ದಾಟಿ ಭಾರತದತ್ತ ಪ್ರಯಾಣ ಬೆಳೆಸಿದ್ದವು. ಕೆಲ ದಿನಗಳ ನಂತರ ಸುರಕ್ಷಿತವಾಗಿ ಗುಜರಾತ್ ತಲುಪಿವೆ. ಇನ್ನೂ ಅನೇಕ ಭಾರತೀಯ ಹಡಗುಗಳು ಹಾರ್ಮುಜ್‌ನಲ್ಲಿಯೇ ಸಿಲುಕಿಕೊಂಡಿವೆ.

ಮೂರು ದೇಶಗಳ ನಡುವಿನ ಯುದ್ಧವು ಸದ್ಯ 23ನೇ ದಿನಕ್ಕೆ ಕಾಲಿಟ್ಟಿದ್ದು, ಮಿಲಿಟರಿ ಸಂಘರ್ಷ ತಣ್ಣಗಾಗುವ ಯಾವುದೇ ಲಕ್ಷಣಗಳು ಕಂಡುಬಂದಿಲ್ಲ. ಭಾನುವಾರ ಮತ್ತೆ ಇರಾನ್‌ಗೆ ಎಚ್ಚರಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಹಾರ್ಮುಜ್ ಜಲಸಂಧಿಯನ್ನು ತೆರೆಯಲು ವಿಫಲವಾದರೆ, ಇರಾನ್‌ನ ವಿದ್ಯುತ್ ಸ್ಥಾವರಗಳನ್ನು ಸಂಪೂರ್ಣವಾಗಿ ನಾಶಪಡಿಸುತ್ತೇವೆ ಎಂದು ಹೇಳಿದ್ದಾರೆ. ಇರಾನ್‌ಗೆ 48 ಗಂಟೆಗಳಷ್ಟು ಕಾಲಾವಕಾಶ ಕೊಟ್ಟಿದ್ದಾರೆ. ಮತ್ತೊಂದೆಡೆ, ಶನಿವಾರ ಸಂಜೆ ಇರಾನ್, ಇಸ್ರೇಲ್‌ನ ಪರಮಾಣು ರಿಯಾಕ್ಟರ್ ಸೌಲಭ್ಯಗಳಿರುವ ಡಿಮೋನಾ ಹಾಗು ಅರಾಡ್ ಪಟ್ಟಣಗಳ ಮೇಲೆಯೇ ಕ್ಷಿಪಣಿ ಹಾರಿಸಿದ್ದು, 100ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಸಂವಿಧಾನದ 9ನೇ ಪರಿಚ್ಛೇದಕ್ಕೆ ತಿದ್ದುಪಡಿ ಉಗ್ರಪ್ಪ ಒತ್ತಾಯ

ಈ ಸಮುದಾಯಗಳಿಗೆ ಆಗುತ್ತಿರುವ ಅನ್ಯಾಯ ತಡೆಗಟ್ಟುವ ನಿಟ್ಟಿನಲ್ಲಿ ಸಂವಿಧಾನ ಶೆಡ್ಯೂಲ್ 9 ಗೆ ಸೇರಿಸಬೇಕು ಎಂದು ಅಗ್ರಹಿಸಿದರು. ನಾನು ಈಗಾಗಲೇ ರಾಜ್ಯದ 14 ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡಿದ್ದೇನೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯ ಜನರ ತಾಳ್ಮೆ ಪರೀಕ್ಷೆ ಮಾಡದೆ 9ನೇ ಶೆಡ್ಯೂಲ್ ಗೆ ತಿದ್ದುಪಡಿ ತರಬೇಕು ಇಲ್ಲದಿದ್ದರೆ ಬೀದಿ ಹೋರಾಟದ ಮೂಲಕ ನಮ್ಮ ಶಕ್ತಿ ಪ್ರದರ್ಶನ ತೋರಿಸಬೇಕಾಗುತ್ತದೆ ಎಚ್ಚರಿಕೆ ನೀಡಿದರು.

ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನರ ಅಭಿವೃದ್ಧಿಗೆ ಸಂವಿಧಾನ ಬದ್ದ ಜನಸಂಖ್ಯೆ ಅನುಗುಣವಾಗಿ ಮೀಸಲಾತಿ ನೀಡಬೇಕು ಎಂಬುದು ನಿಯಮವಿದೆ. ಆದರೆ ಒಳಮೀಸಲಾತಿ ಜಾರಿಯಲ್ಲಿ ರಾಜ್ಯ ಸರಕಾರ ನಿರ್ಲಕ್ಷ್ಯ ಧೋರಣೆ ಅನುಸರಿಸಲಾಗುತ್ತಿದೆ. ಹಳೆ ಮೀಸಲಾತಿ ಜಾರಿ ಮಾಡಲು ಹೊರಟಿರುವುದು ದುರಷ್ಟಕರ ಸಂಗತಿಯಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಡಳಿತ ಅವಧಿಯಲ್ಲಿ ಒಳಮೀಸಲಾತಿ ಜಾರಿ ಮಾಡಬೇಕು. ಒಂದು ನಿರ್ಲಕ್ಷ್ಯ ಧೋರಣೆ ಅನುಸರಿಸಿದರೆ ಹೋರಾಟ ತೀವ್ರ ಸ್ವರೂಪ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.ಕೇವಲ ರಾಜ್ಯ ಸರಕಾರ ಸಾಮಾಜಿಕ ನ್ಯಾಯ ಪರ ಎಂದು ಹೇಳಿದರೆ ಸಾಲದು ಒಳಮೀಸಲಾತಿ ಜಾರಿ ಮಾಡುವುದರ ಮೂಲಕ ತಮ್ಮ ಬದ್ಧತೆ ಪ್ರದರ್ಶನ ಮಾಡಬೇಕು ಎಂದು ಆಗ್ರಹಿಸಿದರು.

ಮೀಸಲಾತಿ ಪ್ರಮಾಣ ಶೇ.50ರಷ್ಟು ಮೀರಬಾರದು ಎಂದು ಸುಪ್ರೀಂಕೋರ್ಟ್ ಹೇಳಿದ್ದರೂ, ಅದೇ ನ್ಯಾಯಾಲಯ ಯಾವ ಸಮುದಾಯಕ್ಕೆ ಅನ್ಯಾಯವಾಗಿದೆ ಅಂತಹ ಅವರಿಗೆ ಮೀಸಲಾತಿ ಪ್ರಮಾಣ ಹೆಚ್ಚಿಸಬೇಕು ಎಂದು ಹೇಳಿದೆ. ಕೆಲವು ರಾಜ್ಯಗಳು ಮೀಸಲಾತಿ ಪ್ರಮಾಣ ಶೇ.69ರಷ್ಟು ಹೆಚ್ಚಿಸಿವೆ. ಅದೇ ಮಾದರಿಯಲ್ಲಿ ಇಲ್ಲಿಯೂ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.ಈ ಸಂದರ್ಭದಲ್ಲಿ ಈ ಸಂದರ್ಭದಲ್ಲಿ ವಾರದಮಯ್ಯ ಸ್ವಾಮಿ, ಸಂಜಯ ಕುಮಾರ ಸ್ವಾಮಿಜಿ ತಿಮ್ಮಪ್ಪ, ಎ. ರಾಜಶೇಖರ್ ನಾಯಕ, ರಘುವೀರ ನಾಯಕ, ಶೇಖರ್ ರಾಜು, ಹನುಮಂತರಾಯ ನಾಯಕ,ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಸಮಾಜದ ಅಭಿವೃದ್ಧಿ ಮಾಡಿದ್ದರೆ ದಾಖಲೆಗಳ ಸಮೇತ ಬಹಿರಂಗ ಚರ್ಚೆಗೆ ಬನ್ನಿ - ಲಿಂಗಯ್ಯನಾಯಕ

ಸಮಾಜದ ಪರವಾಗಿದೆ ಎಂದು ಹೇಳುವ ನೀವು, ಇಲ್ಲಿಯವರೆಗೆ ನಮ್ಮ ಸಮಾಜದ ಬೆಳವಣಿಗೆಗೆ ಆರ್ಥಿಕವಾಗಿ,ಸಾಮಾಜಿಕವಾಗಿ ಮತ್ತು ರಾಜಕಿ ಯವಾಗಿ ಏನೇನು ಕೊಡುಗೆ ನೀಡಿದ್ದೀರಿ, ನಮ್ಮ ನಾಯಕ ಸಮಾಜದಲ್ಲಿ ಯಾರನ್ನು ಬೆಳೆಸಿದ್ದೀರಿ ಬಾಯಿಮಾತಿನಲ್ಲಿ ಹೇಳಬೇಡಿ, ಅಂಕಿ-ಅಂಶಗಳು ಮತ್ತು ಅಧಿಕೃತ ದಾಖಲೆಗಳ ಸಮೇತ ಸಮಾಜದ ಮುಂದೆ ಇಡಿ, ಎಂದು ಲಿಂಗಯ್ಯ ನಾಯಕ ಸೈದಾಪುರ ಪತ್ರಿಕೆ ಮೂಲಕ ಆಗ್ರಹಿಸಿದ್ದಾರೆ.

ಸದನದಲ್ಲಿ ವಿಷಪೂರಿತ ಮಧ್ಯಮಾರಾಟದ ಬಗ್ಗೆ ಧ್ವನಿ ಎತ್ತಿದ - ದದ್ದಲ್

ದಿನಾಲು ಗಂಡ ಹೆಂಡತಿಯ ಜಗಳ ಸಾಲದ ಭಾದೆ ಸೊಮಾರಿತ ಅಪಘಾತಗಳು, ಆತ್ಮಹತ್ಯೆ ಮುಂತಾದವುಗಳು ದಿನನಿತ್ಯ ನನ್ನ ಕ್ಷೇತ್ರದಲ್ಲಿ ನಡೆಯುತ್ತಲಿದ್ದು, ಇವೆಲ್ಲವುಗಳಿಂದ ನನ್ನ ಕ್ಷೇತ್ರ ತಪ್ಪಿಸಿಕೊಂಡು ಸುರಕ್ಷಿತವಾಗಿ ಮತ್ತು ಆರೋಗ್ಯವಾಗಿ, ನನ್ನ ಭಾಗದ ಜನರು ಇರಬೇಕಾದರೆ ತಪ್ಪಿತಸ್ಥರ ವಿರುದ್ಧ ಕಠಿಣವಾದ ಕಾನೂನು ಕ್ರಮ ಕೈಗೊಳ್ಳಬೇಕೆಂದು ಮತ್ತು ಇದನ್ನು ಬಂದು ಮಾಡಬೇಂದು ಸದನದಲ್ಲಿ ಗ್ರಾಮೀಣ ಶಾಸಕರಾದ ಬಸನಗೌಡ ದದ್ದಲ್‌ರವರು ಅಬಕಾರಿ ಸಚಿವರಾದ ಆರ್ ಬಿ ತಿಮ್ಮಾಪೂರು ಅವರಿಗೆ ತಿಳಿಸಬೇಕೆಂದು ಸಭಾದ್ಯಕ್ಷರಾದ ಯು ಟಿ ಖಾದರವರಿಗೆ ಮನವಿಯನ್ನು ಸಲ್ಲಿಸಿದರು.

ರಾಯಚೂರು ಗ್ರಾಮೀಣ ಕ್ಷೇತ್ರದ ಹಿತದೃಷ್ಠಿಯಿಂದ ವಿಷಪೂರಿತ ಮಾಧಕ ವಸ್ತುಗಳ ವಿರುದ್ದ ಧ್ವನಿ ಎತ್ತಿದ ಶಾಸಕರಿಗೆ ಗ್ರಾಮೀಣ ಜನತೆಯು ಮೆಚ್ಚುಗೆಯನ್ನು ವ್ಯಕ್ತಿಪಡಸಿದ್ದಾರೆ. ಅಭಿವೃದ್ಧಿಕಾರ್ಯಗಳ ಕಡೆ ತಮ್ಮ ಗಮನ ಹರಿಸುತ್ತಿರುವುದಕ್ಕೆ ರಾಯಚೂರು ಗ್ರಾಮೀಣ ಜನತೆಯ ಪರವಾಗಿ ನಿಮ್ಮ ಅಭಿವೃದ್ಧಿ ಕಾರ್ಯಗಳ ಅಭಿಮಾನಿ ಸುರೇಶ ನಾಯಕ ದಿನ್ನಿ ಅವರು ನಿಮಗೆ ತುಂಬ ಹೃದಯದ ಅಭಿನಂದನೆಗಳು ಸಲ್ಲಿಸುತ್ತಿನೆ.

ದಿ.31: ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ - ಶಾವಂತಗೇರಿ

ಮಹಿಳಾ ಸಬಲೀಕರಣಕ್ಕೆ ಸಹಕಾರ, ಮಾರ್ಗ ದರ್ಶನ ಮತ್ತು ಸಂಪನ್ಮೂಲಗಳನ್ನು ನೀಡುವುದರ ಮಹತ್ವ ಈ ದಿನಾಚರಣೆ ಮುಖ್ಯ ಗುರಿಯಾಗಿದೆ. ಮಹಿಳೆಯರು ಸಮಾಜದ ಬೆನ್ನೆಲುಬಾಗಿದ್ದು ಕುಟುಂಬ, ಶಿಕ್ಷಣ.ಆರೋಗ್ಯ, ಆರ್ಥಿಕತೆ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಮಹತ್ವದ ಪಾತ್ರ ವಹಿಸಲಿದ್ದಾರೆ.ಅವರನ್ನು ಪ್ರೋತ್ಸಾ ಹಿಸುವ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮ ನಡೆಯಲಿದೆ ಎಂದರು. ಮಹಿಳೆಯರ ಆತ್ಮ ವಿಶ್ವಾಸದಿಂದ ತಮ್ಮ ಗುರಿಗಳನ್ನು ಸಾಧಿಸಲು ಪ್ರೇರೇಪಿಸುವುದು ಮುಖ್ಯ ಉದ್ದೇಶವಾಗಿದೆ. ಮಹಿಳಾ ದಿನಾಚರಣೆ ಪ್ರಯುಕ್ತ ದಿ. 29ರಂದು ಜಿಲ್ಲಾ ಒಳಂಗಣ ಕ್ರೀಡಾಂಗಣದಲ್ಲಿ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದರು.ಮಹಿಳಾ ದಿನಾಚರಣೆಯ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೋರಿದರು.

ಈ ಸಂದರ್ಭದಲ್ಲಿ ಚಾಯಿದೇವಿ, ಜಯಶ್ರೀ, ವಿಜಯಲಕ್ಷ್ಮಿ, ರತ್ನ, ಯಂಕಪ್ಪ ಪಿರಂಗಿ, ನೀಲಮ್ಮ, ರಾಜಶೇಖರ್, ಸೇರಿದಂತೆ ಉಪಸ್ಥಿತರಿದ್ದರು.

ಗ್ಯಾರಂಟಿ ಯೋಜನೆಗಳಿಗೆ ಬಜೆಟ್ ಮೀಸಲು ಸಾಲ ಪ್ರಮಾಣ ಹೆಚ್ಚಳ ಸುಳ್ಳು ಆರೋಪ-ಡಾ.ರಝಾಕ

ಕೊನೆಯವರೆಗೆ 8,24,389 ಕೋ.ರೂ ಇರುತ್ತದೆ. ಈ ಅವಧಿಯಲ್ಲಿ ಸಿದ್ದರಾಯ್ಯನವರ ಸರಕಾರ ಪ್ರತಿ ವರ್ಷ 56,000 ಕೋ.ರೂ ಗಳನ್ನು ರಾಜ್ಯದ ಬಡವರಿಗೆ ಗ್ಯಾರಂಟಿಗಳ ರೂಪದಲ್ಲಿ ಹಂಚುತ್ತಿದೆ, ಇದನ್ನೇ ದೇಶದ ಎಲ್ಲಾ ರಾಜ್ಯಗಳಲ್ಲಿ ಜಾರಿ ಮಾಡಲಾಗುತ್ತಿದೆ, ಎಲ್ಲಾ ಪಕ್ಷಗಳು ಅನುಸರಿಸುತ್ತಿವೆ. ಇದರಿಂದ ರಾಜ್ಯಕ್ಕೆ ಒಳ್ಳೆಯದಾಗುತ್ತದೋ, ಕೆಟ್ಟದಾಗುತ್ತದೋ ಎನ್ನುವ ವಿಷಯ ಚರ್ಚೆಯಲ್ಲಿದ್ದರೂ ಬಡವರಿಗೆ ಸಾಕಷ್ಟು ಉಪಯೋಗವಾಗಿದೆ ಎಂದು ಹೇಳಬಹುದು. ಸುಪ್ರೀ ಕೋರ್ಟ್ ಸಹ ಉಚಿತ ಕೊಡುಗೆಗಳನ್ನು ನೀಡುವ ಬಗ್ಗೆ ಆಕ್ಷೇಪ ಎತ್ತಿದೆ, ಆದರೆ ಅದೇ ಕೋರ್ಟ ಶ್ರೀಮಂತರಿಗೆ ನೀಡುವ ಸಬ್ಸಿ ಡಿ, ಸಾಲ ಮನ್ನಾ ಬಗ್ಗೆ ಮಾತನಾಡದೇ ಇರುವದು ದುರಂತ. ಮುಖ್ಯಮಂತ್ರಿ ಸಿದ್ದರಾಮಯ್ಯ ಒಬ್ಬರೇ ಸಾಲ ಮಾಡಿಲ್ಲ ಹಿಂದಿನ ಬಿಜೆಪಿ ಅವಧಿಯಲ್ಲಿ ಸಾಲ ಮಾಡಲಾಗಿದೆ ಎಂದರು.

ಟೀಕೆಗಾಗಿ ಟೀಕೆ ಮಾಟುವದು ಹವ್ಯಾಸ ಮಾಡಿಕೊಂಡು ರಾಜ್ಯ ಸರಕಾರದ ಬಗ್ಗೆ ಜನರಲ್ಲಿ ವಿಶ್ವಾಸ ಕಡಿಮೆ ಮಾಡಲು ರಚಿಸಿರುವ ಶಡ್ಯಂತ್ಯ ಎನ್ನುವಂತಿದೆ ಇವರೆಲ್ಲರ ನಡುವಳಿಕೆ, ವಾಸ್ತವಾಂಶ ನೋಡಿ ಮಾತನಾಡಲಿ, ರಾಜ್ಯದ ಜನರಿಗೆ ಸತ್ಯ ತಿಳಿಸುವ ಪ್ರಯತ್ನ ಮಾಡಲಿ. ಉಚಿತ ಕೊಡುಗೆಯಿಂದ ಸಾಲವಾಗಿದೆ ಎಂದು ಹೇಳುವದು, ಗ್ಯಾರಂಟಿಗಳನ್ನು ನಿಲ್ಲಿಸಬಾರದು ಎನ್ನುವದು ಇಬ್ಬಗೆ ನೀತಿಯಲ್ಲವೇ, ಗ್ಯಾರಂಟಿಗಳಿಂದ ರಾಜ್ಯ ದಿವಾಳಿಯಾಗಿದೆ ಎನ್ನುವಾಗ ಗ್ಯಾರಂಟಿಗಳನ್ನು ನಿಲ್ಲಿಸಿ ಎಂದು ಗಟ್ಟಿಯಾಗಿ ಬಿಜೆಪಿ ನಾಯಕರು ಹೇಳಬೇಕು, ಅದು ಹೇಳುವ ಧೈರ್ಯವಿಲ್ಲದೇ ಗ್ಯಾರಂಟಿಗಳನ್ನು ಟೀಕಿಸುವದು ಅಪರಾಧವಾಗುತ್ತದೆ. ರಾಜ್ಯ ಸರಕಾರದಲ್ಲಿ ಅನುದಾನವಿಲ್ಲ, ಅಭಿವೃದ್ದಿ ಶೂನ್ಯ ಎನ್ನುವವರು ಗ್ಯಾರಂಟಿಗಳಿಂದಲೇ ಸರಕಾರದಲ್ಲಿ ಅನುದಾನವಿಲ್ಲ ಎನ್ನುವದಾದರೇ ಗ್ಯಾರಂಟಿ ನಿಲ್ಲಸಲು ಬಿಜೆಪಿ ಮತ್ತು ಜೆಡಿಎಸ್ ನವರು ಒತ್ತಾಯ ಮಾಡಬೇಕಲ್ಲವೇ? ಗ್ಯಾರಂಟಿಗಳಿಂದ ಜನರಿಗೆ ಅನುಕೂಲವಾಗಿದೆ.

ನಲುಗಿದ ಇರಾನ್ 30 ಗಂಟೆಗಳಲ್ಲಿ 2,000ಕ್ಕೂ ಹೆಚ್ಚು ಬಾಂಬ್ ದಾಳಿ

ಸಾಮಾನ್ಯ ಕಾರ್ಖಾನೆಗಳು ಮಾತ್ರವಲ್ಲದೆ ಇರಾನ್‌ನ ಕ್ಷಿಪಣಿಗಳನ್ನು ಅಭಿವೃದ್ಧಿಪಡಿಸುವ ಕೇಂದ್ರಗಳ ಮೇಲೆಯೂ ದಾಳಿ ನಡೆದಿದೆ. ಇರಾನಿನ ಕ್ಷಿಪಣಿ ಮತ್ತು ಡ್ರೋನ್ ದಾಳಿಯಿಂದ ತನ್ನ ಮೂವರು ಸೈನಿಕರು ಸಾವನ್ನಪ್ಪಿದ್ದಾರೆ ಮತ್ತು ಇನ್ನೂ ಐದು ಮಂದಿ ಗಾಯಗೊಂಡಿದ್ದಾರೆ ಎಂದು ಇಸ್ರೇಲ್ ಹೇಳಿಕೊಂಡಿದೆ. ಇರಾನ್‌ನಲ್ಲಿ ಕನಿಷ್ಠ 201 ಜನರು ಸಾವನ್ನಪ್ಪಿದ್ದಾರೆ.

2025ರ ಜೂನ್‌ನಲ್ಲಿ ನಡೆಸಿದ ದಾಳಿಯಿಂದಾಗಿ ಇರಾನ್‌ನಲ್ಲಿದ್ದ 3,000 ಕ್ಷಿಪಣಿಗಳ ಸಂಖ್ಯೆಯು 1,300ಕ್ಕೆ ಇಳಿದಿತ್ತು. ಆದರೆ ಕೇವಲ ಎಂಟು ತಿಂಗಳಲ್ಲಿ, ಇರಾನ್ ಪುನರ್ ನಿರ್ಮಾಣ ಆರಂಭಿಸಿದ್ದು 2,500 ಕ್ಷಿಪಣಿಗಳನ್ನು ಹೊಂದಿದೆ ಎಂದು ವರದಿಯಾಗಿದೆ.

ಫೆಬ್ರವರಿ 28ರಂದು ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ಬೃಹತ್ ಸೇನಾ ದಾಳಿ ನಡೆಸಿವೆ. ಈ ಕಾರ್ಯಾಚರಣೆಗೆ ಅಮೆರಿಕ ಆಪರೇಷನ್ ಎಪಿಕ್ ಫ್ಯೂರಿ ಮತ್ತು ಇಸ್ರೇಲ್ ರೋರಿಂಗ್ ಲಯನ್ ಎಂದು ಹೆಸರಿಟ್ಟಿವೆ. ಈ ದಾಳಿಯಲ್ಲಿ ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಹತರಾಗಿದ್ದಾರೆ. ಜತೆಗೆ ಅವರ ಕುಟುಂಬಸ್ಥರು ಮೃತಪಟ್ಟಿದ್ದಾರೆ ಎಂದು ಇರಾನ್ ಸರ್ಕಾರಿ ಮಾಧ್ಯಮಗಳು ಖಚಿತಪಡಿಸಿವೆ. ಇದಕ್ಕೆ ಪ್ರತಿಯಾಗಿ ಇರಾನ್ ಕೂಡ ಇಸ್ರೇಲ್‌ನ ಟೆಲ್ ಅವಿವ್ ಮತ್ತು ಮಧ್ಯಪ್ರಾಚ್ಯ ಕತಾರ್, ಯುಎಇ, ಬಹ್ರೇನ್, ಕುವೈತ್ ಮತ್ತು ಜೋರ್ಡಾನ್‌ನಲ್ಲಿರುವ ಅಮೆರಿಕದ ಮಿಲಿಟರಿ ಬೇಸ್‌ಗಳ ಮೇಲೆ ಕ್ಷಿಪಣಿ ದಾಳಿ ನಡೆಸುತ್ತಿದೆ. ದಾಳಿ ಪ್ರತಿದಾಳಿಗಳು ಮುಂದುವರೆದಿದೆ.

ಮಹಿಳಾಪರ ಚಿಂತನೆಗಳಿಂದ ಸಮ ಸಮಾಜ ನಿರ್ಮಾಣ ಸಾಧ್ಯ : ಸಂತೋಷಿರಾಣಿ

ಕಲಬುರಗಿ,ಮಾ.22-

ಮಹಿಳಾಪರ ಚಿಂತನೆಗಳಿಂದ ಸಮ ಸಮಾಜ ನಿರ್ಮಾಣ ಸಾಧ್ಯ ಎಂದು ಜಿಲ್ಲಾ ಬಿಜೆಪಿ ಉಪಾಧ್ಯಕ್ಷೆ ಸಂತೋಷಿರಾಣಿ ಪಾಟೀಲ ತೆಲ್ಲೂರ ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕಸಾಪ ದಕ್ಷಿಣ ವಲಯದ ಆಶ್ರಯದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಮಹಿಳೆ ನಿನ್ನಿಂದಲೇ ಈ ಇಳೆ ಎಂಬ ಮಹಾಘೋಷವಾಕ್ಯದೊಂದಿಗೆ ಜಿಲ್ಲೆಯ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಮುಖ ಮಹಿಳಾ ಸಾಧಕರಿಗೆ ಜಗದ ಕಣ್ಣು ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮಕ್ಕಳಿಗೆ ಶಿಕ್ಷಣದ ಮೂಲಕ ಸಂಸ್ಕಾರ ನೀಡುವವಳು ಹೆಣ್ಣು. ಅವಳು ತಾಯಿಯಾಗಿ, ಮಗಳಾಗಿ ಹಾಗೂ ಸೊಸೆಯಾಗಿ ಸಮಾಜ ಜವಾಬ್ದಾರಿ ನಿರ್ವಹಿಸಿರುತ್ತಾಳೆ. ಸೊಸೆಯನ್ನು ಮಗಳಂತೆ ಹಾಗೂ ಅತ್ತೆಯನ್ನು ತಾಯಿಯಂತೆ ಕಾಣುವ ನೋಟ ಅಳವಡಿಸಿಕೊಳ್ಳಬೇಕು. ನಿಜವಾಗಿಯೂ ಮಹಿಳೆ ಜಗದ ಕಣ್ಣು ಇದ್ದಂತೆ. ಆದರೆ ಕಣ್ತೆರೆಸುವ ವ್ಯವಸ್ಥೆ ಬದಲಾಗಬೇಕಾಗಿದೆ ಎಂದರು.

ಪ್ರಶಸ್ತಿ ಪ್ರದಾನ ಮಾಡಿದ ಮಹಾನಗರ ಪಾಲಿಕೆ ಉಪ ಆಯುಕ್ತರಾದ ಪ್ರಮೀಳಾ ಪರ್ಲ, ಪ್ರತಿ ಕ್ಷೇತ್ರಗಳಲ್ಲಿ ಪ್ರಗತಿ ಹೊಂದುತ್ತಿರುವ ಮಹಿಳೆಯರಿಂದ ಸಮ ಸಮಾಜ ಕಟ್ಟಲು ಸಾಧ್ಯ. ಮಹಿಳೆಯು ಇಂದು ಹೊಸ ಸಂವೇದನಾಶೀಲ ಬದುಕನ್ನು ಕಟ್ಟಿಕೊಂಡು ಅದನ್ನು ಸಮರ್ಥವಾಗಿ ನಿಭಾಯಿಸಬಲ್ಲಳು. ಪುರುಷರಷ್ಟೇ ಸಮಾನಳಾಗಿ ಮೇಲುಗೈ ಸಾಧಿಸುತ್ತಿದ್ದಾಳೆ ಎಂದರು.

ಶರಣ ಲೇಖಕಿ ಡಾ. ಶಿವಲೀಲಾ ಚಟ್ನಳ್ಳಿ, ರಾಜ್ಯಮಟ್ಟದ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಪುರಸ್ಕೃತೆ ಅನ್ನಪೂರ್ಣ ಸಂಗೋಳಗಿ, ಸಾಮಾಜಿಕ ಚಿಂತಕಿ ಕು. ಮಾಲಾ ದಣ್ಣೂರ, ವಾಪಿ ಕನ್ನಡ ಸಂಘದ ಕಾರ್ಯದರ್ಶಿ ಪರಮೇಶ್ವರ ಬೆಳಮಗಿ,



ಕಸಾಪ ದಕ್ಷಿಣ ವಲಯ ಅಧ್ಯಕ್ಷ ರವಿಕುಮಾರ ಶಹಾಪೂರಕರ್, ಜಿಲ್ಲಾ ಕಸಾಪ ದ ಶಿವರಾಜ ಅಂಡಗಿ, ಧರ್ಮಣ್ಣ ಎಚ್ ಧನ್ನಿ, ಶರಣರಾಜ ಛಪ್ಪರಬಂದಿ, ಧರ್ಮರಾಜ ಜವಳಿ, ಮಲ್ಲಿನಾಥ ಸಂಗಶೆಟ್ಟಿ, ಮಂಜುನಾಥ ಕಂಬಾಳಿಮಠ, ದಿನೇಶ ಮದಕರಿ, ರಾಜೇಂದ್ರ ಮಾಡಬೂಳ, ಹಣಮಂತರಾವ ಪೆಂಚನಪಳ್ಳಿ, ವೆಂಕುಬಾಯಿ ರಜಪೂತ, ಮಾಣಿಕಮ್ಮ ಜಮಾದಾರ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಕಸಾಪ ಜಿಲ್ಲಾಧ್ಯಕ್ಷ ವಿಜಯಕುಮಾರ ಪಾಟೀಲ ತೇಗಲತಿಪ್ಪಿ, ಮಹಿಳೆಯು ತ್ಯಾಗ ಜೀವಿಯಾಗಿದ್ದು, ಯಾವ ಕುಟುಂಬದಲ್ಲಿ ಮಹಿಳೆ ಪೂಜಿಸುತ್ತಾಳವೋ ಅಂತಹ ಮನೆಯಲ್ಲಿ ದೇವರು ಸದಾ ನೆಲೆಸಿರುತ್ತಾನೆ. ಆದ್ದರಿಂದ ಮಹಿಳೆಯರನ್ನು ಗೌರವಿಸುವ ಕಾರ್ಯವಾಗಬೇಕು ಎಂದರು.

ಮಹಿಳಾ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸಿದ ಮಹನೀಯರಾದ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷೆ ಶಶಿಕಲಾ ಟೆಂಗಳಿ, ಮಾಜಿ ಮೇಯರ್ ಮಲ್ಲಮ್ಮ ವಳಕೇರಿ, ಶೀಲಾವತಿ ಭೀಮರಾವ ಟಿ.ಟಿ., ಆದರ್ಶ ಶಿಕ್ಷಕಿ ಆರತಿ ಬಳಗಾರ, ಚಿಂಚೋಳಿ ಪುರಸಭೆ ಮಾಜಿ ಅಧ್ಯಕ್ಷೆ ಜಗದೇವಿ ಗಡಂತಿ, ಮನೋಶಾಸ್ತಜ್ಞೆ ಡಾ. ರೇಣುಕಾ ಬಗಾಲೆ, ಜಿಪಂ ನ ಮಾಜಿ ಸದಸ್ಯೆ ಸುನಂದಾ ರವಿರಾಜ ಕೊರವಿ, ಸಾಂಸ್ಕೃತಿಕ ಸಂಘಟಕಿ ಶ್ವೇತಾ ಪಾಟೀಲ ಅವರನ್ನು ಜಗದ ಕಣ್ಣು ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಕವಿ ಕಂಡ ಯುಗಾಗಿ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಕಥೆಗಾರ ಸಿ.ಎಸ್.ಆನಂದ, ಕವಿಗಳು, ಸಾಹಿತಿಗಳು ಸುಮ್ಮನೆ ಕಾವ್ಯ ರಚಿಸದೆ ಸಾಮಾಜಿಕ ಜವಾಬ್ದಾರಿಯೊಂದಿಗೆ ಕಾಲದ ದನಿಯಾಗಬೇಕಾಗಿದೆ. ಕವಿತೆ ರಚಿಸುವುದು ಕೇವಲ ಕವಿಯ ಭಾವನೆಗಳ ಅಭಿವ್ಯಕ್ತಿಯಲ್ಲ. ಅದೊಂದು ಕ್ಲಿಷ್ಟಕರವಾದ ಸೃಜನಾತ್ಮಕ ಪ್ರಕ್ರಿಯೆ. ಕವಿ ಸಮಾಜದ ಒಂದು ಭಾಗವಾಗಿರುವುದರಿಂದ ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಆಶಯಗಳನ್ನು ಸಂರಕ್ಷಿಸುವ ಹೊಣೆಗಾರಿಕೆಯನ್ನು ತಮ್ಮ ಹೆಗಲ ಮೇಲೆ ಹೊತ್ತುಕೊಳ್ಳಬೇಕು ಎಂದರು. ಕವಿಗಳಾದ ಪ್ರಭು ನಿಷ್ಠಿ ನಿಡಗುಂದಾ, ಶಕುಂತಲಾ ಪಾಟೀಲ ಜಾವಳಿ, ಜಯಶ್ರೀ ಜಮಾದಾರ, ಅಶ್ವಿನಿ ಎಂ ಪಾಟೀಲ, ವಿದ್ಯಾಧರ ಕಾಂಬಳೆ, ಶರಣು ಅತನೂರ, ಭೀಮರಾಯ ಹೇಮನೂರ, ಜ್ಯೋತಿ ಪಾಟೀಲ, ಶ್ರೀದೇವಿ ಪೊಲೀಸ್ ಪಾಟಖೀಲ, ಕವಿತಾ ಪಿ ಮೋರಾ ಅವರು ವರ್ತಮಾನಕ್ಕೆ ಸ್ಪಂದಿಸುವ ಕವಿತೆಗಳು ವಾಚಿಸಿ ಪ್ರೇಕ್ಷಕರ ಗಮನ ಸೆಳೆದರು.

ಪ್ರತಿ ವರ್ಷ ಅಕ್ಕನ ವಿಚಾರ ಸಂಕಿರಣ: ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ವಿಜಯಾ

ಬೀದರ್,ಮಾ.22-

ನೆರೆಯ ಆಂಧ್ರಪ್ರದೇಶದ ಶ್ರೀಶೈಲಂನ ಅಕ್ಕ ಮಹಾದೇವಿ ಚೈತನ್ಯ ಪೀಠದಲ್ಲಿ ಗುರುವಾರ ಆಯೋಜಿಸಿದ್ದ ಏಕ್ ಲಾಖ್ ಪೇಡ್ ಗುರು ಮಾತಾ ಕೇ ನಾವ್ ಅಭಿಯಾನದ ಸಮಾರೋಪ ಹಾಗೂ ಅಕ್ಕ ಮಹಾದೇವಿ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭವನ್ನು ರುದ್ರಾಕ್ಷಿ ಸಸಿ ನೆಟ್ಟು ಉದ್ಘಾಟಿಸಿ ಅವರು ಮಾತನಾಡಿದರು.

12ನೇ ಶತಮಾನದ ಶರಣೆ ಅಕ್ಕಮಹಾದೇವಿ ಸ್ತ್ರೀಯರಿಗೆ ಆದರ್ಶಪ್ರಾಯರಾಗಿದ್ದಾರೆ. ಅವರ ಜೀವನ ಹಾಗೂ ಸಾಧನೆಗಳನ್ನು ಎಲ್ಲರೂ ಅರಿತುಕೊಳ್ಳಬೇಕಾಗಿದೆ. ಮಹಿಳಾ ಆಯೋಗವು ಹೆಣ್ಣುಮಕ್ಕಳನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಸರ್ವ ಪ್ರಯತ್ನ ನಡೆಸುತ್ತಿದೆ. ಮಹಿಳಾ ಸಬಲೀಕರಣಕ್ಕೆ ಶ್ರಮಿಸುತ್ತಿದೆ ಎಂದು ಹೇಳಿದರು.

ಅಕ್ಕ ಮಹಾದೇವಿ ಚೈತನ್ಯ ಪೀಠದ ಸಂಯೋಜಕ ರಾಜಶೇಖರ ಶಿವಾಚಾರ್ಯ ಮಾತನಾಡಿ, ಮಾತೆ ಕರುಣಾದೇವಿ ಅವರು ಐದು ದಶಕದಿಂದ ಸಮಾಜೋ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ದೇಶದಾದ್ಯಂತ ಐದು ಭಾಷೆಗಳಲ್ಲಿ ಅಕ್ಕ ಮಹಾದೇವಿ ಅವರ ಜೀವನ ಮತ್ತು ಸಾಧನೆಗಳ ಪ್ರಚಾರ ಹಾಗೂ ಪ್ರಸಾರ ಮಾಡುತ್ತಿದ್ದಾರೆ ಎಂದು ಹೇಳಿದರು.

ಕೇಂದ್ರ ಸರ್ಕಾರದ ರಾಜ್ಯ ಅಭಿವೃದ್ಧಿ, ಸಮನ್ವಯ ಹಾಗೂ ಮೇಲುಸ್ತುವಾರಿ ಸಮಿತಿ ಸದಸ್ಯ ಶಿವಯ್ಯ ಸ್ವಾಮಿ ಮಾತನಾಡಿ, ಜನನಿ, ಜನ್ಮಭೂಮಿ ಹಾಗೂ ಗೋಮಾತೆಯನ್ನು ಗೌರವಿಸಲು ಅಭಿಯಾನ ಹಮ್ಮಿಕೊಳ್ಳಲಾಗಿತ್ತು. ಎಲ್ಲರ ಸಹಕಾರದಿಂದ ಅಭಿಯಾನ ಯಶಸ್ವಿಯಾಗಿದೆ. ಅಭಿಯಾನಕ್ಕೆ ಎಲ್ಲೆಡೆ ಮೆಚ್ಚುಗೆ ವ್ಯಕ್ತವಾಗಿದ್ದು, ನಮ್ಮ ಶ್ರಮ ಸಾರ್ಥಕವಾಗಿದೆ ಎಂದು ತಿಳಿಸಿದರು.

ವಿಜಯಾ ಕೆ. ರಹಾಟಕರ್ ಹಾಗೂ ತೆಲಂಗಾಣ ರಾಜ್ಯ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ನೇತಿ ಮಹೇಶ್ವರ ಅವರಿಗೆ ಅಕ್ಕ ಮಹಾದೇವಿ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಲಾಯಿತು. ಅಕ್ಕ ಮಹಾದೇವಿ ಚೈತನ್ಯ ಪೀಠದ ಅಧಿಪತಿ ಮಾತೆ ಕರುಣಾದೇವಿ ಸಾನ್ನಿಧ್ಯ ವಹಿಸಿದ್ದರು. ಆಂಧ್ರಪ್ರದೇಶ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ರಾಯಪಟಿ ಶೈಲಜಾ ಅಧ್ಯಕ್ಷತೆ ವಹಿಸಿದ್ದರು.

ವಿಧಾನ ಪರಿಷತ್ ಸದಸ್ಯ ಹಣಮಂತ ನಿರಾಣಿ, ರಾಚೋಟಿ ವೀರಭದ್ರೇಶ್ವರ ದೇವಸ್ಥಾನದ ಆಡಳಿತ ಮಂಡಳಿ ಸದಸ್ಯ ಸಿ.ಎಂ. ಶಿವಶರಣಪ್ಪ, ನಂದ್ಯಾಳ್ ಜಿಲ್ಲಾ ಪಂಚಾಯಿತಿಯ ಯೋಜನಾ ನಿರ್ದೇಶಕ ಶ್ರೀಧರ ರೆಡ್ಡಿ, ನಂದ್ಯಾಳ್ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿ ಲೀಲಾವತಿದೇವಿ, ರಾಷ್ಟ್ರೀಯ ಮಹಿಳಾ ಆಯೋಗದ ಉಪ ನಿರ್ದೇಶಕ ರಾಮಅವತಾರ ಸಿಂಗ್, ಮೇರಾ ಯುವ ಭಾರತ್ ಜಿಲ್ಲಾ ಯುವ ಅಧಿಕಾರಿ ಮಯೂರಕುಮಾರ ಗೋರಮೆ, ಮಾಜಿ ಶಾಸಕ ಸುಭಾಷ್ ಕಲ್ಲೂರ, ರಾಚೋಟಿ ವಿಶ್ವ ಹಿಂದೂ ಪರಿಷತ್ ಜಿಲ್ಲಾ ಜಂಟಿ ಕಾರ್ಯದರ್ಶಿ ಸುಬ್ಬಯ್ಯ ಸ್ವಾಮಿ ರಾಚೋಟಿ ಮತ್ತಿತರರು ಇದ್ದರು. ವಿದ್ಯಾ ಗುಬ್ಬಿತೋಟದಪ್ಪ ನಿರೂಪಿಸಿದರು. ನಟರಾಜ ಸ್ವಾಮಿ ಸ್ವಾಗತಿಸಿದರು. ರಾಕೇಶ್ ಮಠಪತಿ ವಂದಿಸಿದರು.

ಬೋಸರಾಜು ಫೌಂಡೇಶನ್ ರಂಜಾನ್ ಹಬ್ಬದ ಆಹಾರ ಕಿಟ್

ಸಿರವಾರ,ಮಾ.22-

ಪಟ್ಟಣದ ವಾರ್ಡ ನಂ10 ರ ಸದಸ್ಯರಾದ ಹನುಮಂತಿ ಸೈನ್ಯ (ಅವರ ಸುಪುತ್ರ ರಂಗನಾಥ ಭೋವಿ) ಅವರು ರಾಜ್ಯ ಸರ್ಕಾರದ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರಾದ ಎನ್.ಎಸ್ ಬೋಸರಾಜು ಹಾಗೂ ಮಾನ್ವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯನಾಯಕ (ಎನ್.ಎಸ್.ಬೋಸರಾಜು ಫೌಂಡೇಶನ್) ಅವರು ರಂಜಾನ್ ಹಬ್ಬದ ಅಂಗವಾಗಿ ಆಹಾರ ಕೀಟ್ ವಿತರಣೆ ಮಾಡಿದರು. ಈ ಸಂದರ್ಭದಲ್ಲಿ ಮಾಜಿ ಸದಸ್ಯ ರಾಜಮಹ್ಮದ್, ಮೈನುಸಬ್,ರಂಗಪ್ಪ, ಚಂದ್ರು, ಹುಡಿದಯ್ಯ,ಪೀರಸಾಬ್, ಹುಸೇನಸಾಬ್ ಇದರು

ಸಿರವಾರ: ಕನ್ನಡ ಸೇನೆ ಕರ್ನಾಟಕ ಸಂಘಟನೆ ಬಲವರ್ಧನೆಗೆ ಬಸವರಾಜ್ ಕರೆ

ಸಿರವಾರ,ಮಾ.22-

ತಾಲೂಕಿನಲ್ಲಿ ಕನ್ನಡ ಸೇನೆ ಕರ್ನಾಟಕ ಸಂಘಟನೆಯನ್ನು ಮತ್ತಷ್ಟು ಚುರುಕುಗೊಳಿಸುವ ಹಾಗೂ ಸಂಘಟನಾತ್ಮಕವಾಗಿ ಬಲಪಡಿಸುವ ನಿಟ್ಟಿನಲ್ಲಿ ಸಂಘಟನೆಯ ಜಿಲ್ಲಾಧ್ಯಕ್ಷರಾದ ಎಂ. ಬಸವರಾಜ್ ಅವರ ನೇತೃತ್ವದಲ್ಲಿ ಮಹತ್ವದ ಸಭೆ ನಡೆಸಲಾಯಿತು.



ಸಭೆಯನ್ನುದ್ದೇಶಿಸಿ ಮಾತನಾಡಿದ ಜಿಲ್ಲಾಧ್ಯಕ್ಷ ಎಂ. ಬಸವರಾಜ್ ಅವರು, ಕನ್ನಡ ನಾಡು, ನುಡಿ ಹಾಗೂ ಜಲದ ರಕ್ಷಣೆಗಾಗಿ ಕನ್ನಡ ಸೇನೆ ನಿರಂತರವಾಗಿ ಶ್ರಮಿಸುತ್ತಿದೆ. ಸಿರವಾರ ತಾಲೂಕಿನಲ್ಲಿ ಸಂಘಟನೆಯು ತಳಮಟ್ಟದಿಂದ ಗಟ್ಟಿಯಾಗಬೇಕಿದೆ. ಪ್ರತಿಯೊಬ್ಬ ಕಾರ್ಯಕರ್ತರು ಅನ್ಯಾಯದ ವಿರುದ್ಧ ಧ್ವನಿ ಎತ್ತಿ, ಸಂಘಟನೆಯ ಆಶಯಗಳನ್ನು ಮನೆಮನೆಗೆ ತಲುಪಿಸಬೇಕು, ಎಂದು ತಿಳಿಸಿದರು.

ಸಂಘಟನಾ ಚಟುವಟಿಕೆ: ತಾಲೂಕಿನಾದ್ಯಂತ ಹೊಸ ಸದಸ್ಯರ ನೋಂದಣಿ ಮತ್ತು ಘಟಕಗಳ ರಚನೆಗೆ ಆದ್ಯತೆ. ಹೋರಾಟದ ರೂಪರೇಷೆ: ಸ್ಥಳೀಯ ಸಮಸ್ಯೆಗಳಿಗೆ ಸ್ಪಂದಿಸುವುದು ಹಾಗೂ ಕನ್ನಡ ವಿರೋಧಿ ಧೋರಣೆಗಳ ವಿರುದ್ಧ ಹೋರಾಟ ರೂಪಿಸುವುದು.

ಜವಾಬ್ದಾರಿ ಹಂಚಿಕೆ: ಸಕ್ರಿಯ ಕಾರ್ಯಕರ್ತರಿಗೆ ವಿವಿಧ ಹಂತಗಳಲ್ಲಿ ಜವಾಬ್ದಾರಿ ನೀಡಿ ಸಂಘಟನೆಯನ್ನು ಚುರುಕುಗೊಳಿಸುವುದು.

ಈ ಸಂದರ್ಭದಲ್ಲಿ ಸಿರವಾರ ತಾಲೂಕು ಘಟಕದ ಪ್ರಮುಖ ಪದಾಧಿಕಾರಿಗಳಾದ ಗೋವಿಂದ ಚೌಹಾಣ್, ಹನುಮೇಶ್ ಮೇಟಿ, ಯೇಸುಮಿತ್ರ ಮಚ್ಚಿ, ಚಂದ್ರಶೇಖರ್ ಮೌನೇಶ ಪಿತಗಲ್, ಅಂಬರೀಶ್ ಕನಸಾವಿ, ರಾಮ ಗಿಂಡಿ, ರಾಜು ಬೋವಿ, ಮಾದೇಶ್ ನಾಯಕ್, ನಾಗರಾಜ್ ನಾಯಕ್, ಅನೂಕ್ ಬಡ್ಡ, ಆಂಜನೇಯ ಬೋವಿ,ನಾಗರಾಜ್ ನಾಯಕ್. ದೇವರಾಜ್. ರಾಜು ಇನ್ನಿತರ ಉಪಸ್ಥಿತರಿದ್ದರು

ಸಾಹಿತ್ಯ ಸೌರಭ ಕೃತಿಯ ಪರಿಚಯ ಕಾರ್ಯಕ್ರಮ



ಕಲಬುರಗಿ ,ಮಾ.22-

ಕನ್ನಡನಾಡು ಲೇಖಕರ ಮತ್ತು ಓದುಗರ ಸಹಕಾರ ಸಂಘದ ವತಿಯಿಂದ ನಗರದಲ್ಲಿ ನಡೆದ ಪುಸ್ತಕ ಪರಿಚಯ ಮಾಲಿಕೆಯ ಕಾರ್ಯಕ್ರಮದಲ್ಲಿ ಡಾ. ಸುರೇಂದ್ರಕುಮಾರ ಕೆರಮಗಿ ರಚಿಸಿದ ಸಾಹಿತ್ಯ ಸೌರಭ ಕೃತಿಯನ್ನು ಪರಿಚಯಿಸಲಾಯಿತು.

ಸಾಹಿತಿ ಹಾಗೂ ಕನ್ನಡ ವಿಶ್ವವಿದ್ಯಾಲಯ ಹಂಪಿಯ ವಿಸ್ತರಣಾ ಕೇಂದ್ರ ದೇವದುರ್ಗದ ನಿರ್ದೇಶಕರಾದ ಡಾ.ಶಾಂತಪ್ಪ ಡಂಬಳ ಅವರು ಕೃತಿಯನ್ನು ಪರಿಚಯಿಸಿ ಮಾತನಾಡಿ, ಈ ಕೃತಿ ಮಾನವ ಸಂಬಂಧಗಳ ಬೆಸುಗೆಯ ಪ್ರತೀಕವಾಗಿದ್ದು, ಸಂವೇದನಾಶೀಲ ಲೇಖನಗಳ ಸಂಕಲನವಾಗಿದೆ ಎಂದು ಹೇಳಿದರು.

ಕೃತಿಯಲ್ಲಿರುವ ಲೇಖನಗಳು ಸಾಂದರ್ಭಿಕವಾಗಿ ರಚಿಸಲ್ಪಟ್ಟಿದ್ದು, ಈಗಾಗಲೇ ವಿವಿಧ ಸಾಹಿತ್ಯ ಪತ್ರಿಕೆಗಳಲ್ಲಿ ಪ್ರಕಟಗೊಂಡಿರುವುದರ ಜೊತೆಗೆ ಅನೇಕ ಸಾಹಿತ್ಯ ಸಮ್ಮೇಳನಗಳಲ್ಲಿ ಪ್ರಬಂಧ ರೂಪದಲ್ಲಿ ಮಂಡನೆಯಾಗಿವೆ ಎಂದು ತಿಳಿಸಿದರು. ಮುಂದುವರೆದು ಮಾತನಾಡಿದ ಅವರು, ಕೃತಿಯಲ್ಲಿ ವರ್ತಮಾನದ ತಲ್ಲಣಗಳು, ಮಹಿಳಾ ಸಂವೇದನೆಗಳು, ದಲಿತಪರ ಚಳುವಳಿಗಳು ಹಾಗೂ ಕನ್ನಡಪರ ಹೋರಾಟಗಳ ಬಗ್ಗೆ ಚರ್ಚಿಸಲಾಗಿದೆ. ಈ ಕೃತಿ ಸಂಶೋಧನಾ ವಿದ್ಯಾರ್ಥಿಗಳು ಮತ್ತು ಸಾಹಿತ್ಯಾಸಕ್ತರಿಗೆ ಪೂರಕವಾದ ಗ್ರಂಥವಾಗಿದೆ ಎಂದರು. ಕೃತಿಯ ಲೇಖಕರಾದ ಡಾ.ಸುರೇಂದ್ರಕುಮಾರ ಕೆರಮಗಿ ಅವರು ತಮ್ಮ ಸಾಹಿತ್ಯಿಕ ಅನುಭವಗಳನ್ನು ಹಂಚಿಕೊಂಡರು. ಶರಣಬಸವ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಶ್ರೀಶೈಲ ಮದಾನೆ ಹಾಗೂ ಸಾಹಿತಿ ರೇವಣಸಿದ್ಧಪ್ಪ ದುಕಾನ ಅವರು ಕೃತಿಯ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಅಪ್ಪಾರಾವ ಅಕ್ಕೋಣೆ ವಹಿಸಿದ್ದರು. ಡಾ.ವಿಜಯಕುಮಾರ ಪರುತೆಯವರು ಕಾರ್ಯಕ್ರಮವನ್ನು ನಿರೂಪಿಸಿದರು. ಡಾ.ಗವಿಸಿದ್ಧಪ್ಪ ಪಾಟೀಲ್ ಸ್ವಾಗತಿಸಿ, ಡಾ.ಮಲ್ಲಿನಾಥ ತಳವಾರ ವಂದಿಸಿದರು.

ಈ ಸಂದರ್ಭದಲ್ಲಿ ಪ್ರೊ.ರವೀಂದ್ರ ಪಾಟೀಲ್, ಡಾ.ಎಸ್.ಶಿವಪುತ್ರ, ಡಾ. ರಾಜಕುಮಾರ ಮಾಳಗೆ, ವಿಶ್ವನಾಥ ಭಕರೆ, ಎಸ್.ಎಸ್. ಪಾಟೀಲ್, ರಾಜೇಂದ್ರ ಝುಳಕಿ, ಪ್ರೊ. ಎಸ್.ಎಲ್. ಪಾಟೀಲ್ ಇದ್ದರು.

ಬಹುಜನರು ಅಂಬೇಡ್ಕರ್ ವಿಚಾರಗಳನ್ನು ಅರಿತು ಅಳವಡಿಸಿಕೊಳ್ಳಬೇಕು: ಸಂಪತ್ತುರಾಜ್

ಗುರಿಯಾಗಿಸಿಕೊಂಡು ಸರಳವಾದ ರೀತಿಯಲ್ಲಿ ಮನೆ ಮನೆಗೆ ಅಂಬೇಡ್ಕರ್ ಕಾರ್ಯಕ್ರಮ ಮೂಲಕ ರಾಜ್ಯಾದಾದ್ಯಂತ ಬಾಬಾಸಾಹೇಬ್ ಅಂಬೇಡ್ಕರ್ ವಿಚಾರ, ಚಿಂತನೆಗಳನ್ನು ಶೋಷಿತರ ಹಾಗೂ ಮೂಲನಿವಾಸಿಗರ ನಿಜವಾದ ಇತಿಹಾಸವನ್ನು ತಿಳಿಸುವ ಮಹತ್ವದ ಕಾರ್ಯ ಇದಾಗಿದೆ ಎಂದರು.

ಮಕ್ಕಳ ಆಸಕ್ತಿಯಂತೆ ಕಮಲ, ಜಯಲಲೀತಾ ಮತ್ತು ಕೀರ್ತನಾ ವಿದ್ಯಾರ್ಥಿಗಳಿಂದ ಸಂವಿಧಾನ ಪೀಠಿಕೆ ಓದುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ದಲಿತ ಸಂಘರ್ಷ ಸಮಿತಿ(ಬಿ.ಕೆ. ಬಣ) ತಾಲೂಕ ಸಂಚಾಲಕ ಭೀಮಣ್ಣ ಮದ್ಲಾಪೂರ ಅಧ್ಯಕ್ಷತೆ ವಹಿಸಿದ್ದರು. ಬಹುಜನ ಸಂಘರ್ಷ ಸಮಿತಿ ಮಾನವಿ ತಾಲೂಕ ಕಾರ್ಯಾಧ್ಯಕ್ಷ ಕುಮಾರ್ ಕಾತರಕಿ ನಿರೂಪಿಸಿ ವಂದಿಸಿದರು.

ಈ ಸಂದರ್ಭದಲ್ಲಿ ಬಹುಜನ ಸಂಘರ್ಷ ಸಮಿತಿ ಮಾನವಿ ತಾಲೂಕಾಧ್ಯಕ್ಷ ಯಮುನಪ್ಪ ಜಾಗೀರಪನ್ನೂರ, ಒಳಮೀಸಲಾತಿ ಹೋರಾಟಗಾರ ಬಸವರಾಜ್ ಗವಿಗಟ್, ಮರಿಸ್ವಾಮಿ ಅಮರಾವತಿ, ಶಿವರಾಜ ಮರಾಟ, ದಸಂಸ ಮುಖಂಡ ಹುಸೇನಪ್ಪ ಜಗ್ಲಿ ಜಾಗೀರಪನ್ನೂರ, ರವಿಕುಮಾರ್ ಮದ್ಲಾಪೂರ, ಹನುಮೇಶ್, ಇಮಾನ್ ವೇಲ್, ಹುಸೇನಪ್ಪ ಗ್ರಾಮ ಪಂಚಾಯತಿ ಸದಸ್ಯರು, ಮಹಾದೇವ, ಬೆಂಜಮೀನ್, ಅನಿಲ್ ಕುಮಾರ್, ಎಲ್ಲೇಶ್, ಬೈಲಪ್ಪ, ನರಸಪ್ಪ, ದುರುಗಪ್ಪ ಸಾದಾಪೂರ, ಶಾಂತರಾಜ್, ಕವಿತಾ, ಸುಮಂಗಲ, ಲಲಿತಮ್ಮ ಮದ್ಲಾಪೂರ ಸೇರಿದಂತೆ ಮಹಿಳೆಯರು, ಮಕ್ಕಳು ಭಾಗವಹಿಸಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಅಸ್ಸಾಂ ಅಖಾಡ : ಬಿಜೆಪಿ ಮಿತ್ರಪಕ್ಷ ಎಜಿಪಿಯಿಂದ ಶೇ. 50 ಮುಸ್ಲಿಂ ಅಭ್ಯರ್ಥಿಗಳು; ಏನಿದು 'ಕಮಲ'ದ ಹೊಸ ರಣತಂತ್ರ ?



ತಾನು ತನ್ನ ಸೈದ್ಧಾಂತಿಕ ನಿಲುವಿನಂತೆ ಮುಸ್ಲಿಮರಿಗೆ ಟಿಕೆಟ್ ನಿರಾಕರಿಸಿದರೂ, ಅಧಿಕಾರ ಹಿಡಿಯುವ ಏಕೈಕ ಮಹತ್ವಾಕಾಂಕ್ಷೆಯಿಂದ ಮಿತ್ರಪಕ್ಷಗಳ ಮುಖಾಂತರ ಅದೇ ಮುಸ್ಲಿಂ ನಾಯಕರನ್ನು ಅಖಾಡಕ್ಕಿಳಿಸಿ ವಿರೋಧಿ ಪಾಳೆಯದ ಮತಬ್ಯಾಂಕ್‌ಗೆ ಕನ್ನ ಹಾಕಲು ಬಿಜೆಪಿ ಮಾಸ್ಟರ್ ಪ್ಲಾನ್ ರೂಪಿಸಿದೆ

ಅಸ್ಸಾಂ ವಿಧಾನಸಭಾ ಚುನಾವಣೆಯ ಕಾವೇರುತ್ತಿದ್ದಂತೆ, ಅಧಿಕಾರ ಉಳಿಸಿಕೊಳ್ಳಲು ಎನ್‌ಡಿಎ ತೀವ್ರ ಕಸರತ್ತು ನಡೆಸುತ್ತಿದೆ. ಪ್ರತಿಪಕ್ಷಗಳನ್ನು ಕಟ್ಟಿಹಾಕಲು ಹೊಸ ತಂತ್ರಗಾರಿಕೆಗಳಿಗೆ ಮೊರೆಹೋಗಿರುವ ಆಡಳಿತಾರೂಢ ಮೈತ್ರಿಕೂಟ, ಅಚ್ಚರಿಯ ಹೆಜ್ಜೆಗಳನ್ನಿಡುತ್ತಿದೆ. ಒಂದು ಕಡೆ ಬಿಜೆಪಿ ತನ್ನ ಪ್ರಖರ ಹಿಂದುತ್ವದ ಅಜೆಂಡಾವನ್ನು ಬಲಪಡಿಸಿಕೊಳ್ಳುತ್ತಿದ್ದರೆ, ಮತ್ತೊಂದೆಡೆ ತನ್ನ ಪ್ರಾದೇಶಿಕ ಮಿತ್ರಪಕ್ಷವಾದ ಅಸೋಮ್ ಗಣ ಪರಿಷತ್ (ಎಜಿಪಿ) ಮೂಲಕ ಅಚ್ಚರಿಯ ರಾಜಕೀಯ ನಡೆಯೊಂದನ್ನು ಪ್ರದರ್ಶಿಸಿದೆ. ಇದು ಮೇಲ್ನೋಟಕ್ಕೆ ಎಜಿಪಿಯ ತೀರ್ಮಾನದಂತೆ ಕಂಡರೂ, ಇದರ ಹಿಂದೆ ಕಮಲ ಪಡೆಯ ತಂತ್ರಗಾರಿಕೆ ಅಡಗಿದೆ ಎಂಬ ವಿಶ್ಲೇಷಣೆಗಳು ರಾಜಕೀಯ ವಲಯದಲ್ಲಿ ಕೇಳಿಬರುತ್ತಿವೆ.

ಈ ಚುನಾವಣೆಯಲ್ಲಿ ಮಿತ್ರಪಕ್ಷ ಅಸೋಮ್ ಗಣ ಪರಿಷತ್ ಕೈಗೊಂಡಿರುವ ನಿರ್ಧಾರ ಎಲ್ಲರ ಹುಬ್ಬೇರಿಸಿದೆ. ಎನ್‌ಡಿಎ ಮೈತ್ರಿಕೂಟದಲ್ಲಿರುವ ಎಜಿಪಿ ಪಕ್ಷಕ್ಕೆ ಒಟ್ಟು 126 ವಿಧಾನಸಭಾ ಕ್ಷೇತ್ರಗಳ ಪೈಕಿ 26 ಸ್ಥಾನಗಳನ್ನು ಬಿಟ್ಟುಕೊಡಲಾಗಿದೆ. ಅಚ್ಚರಿಯ ಸಂಗತಿಯೆಂದರೆ, ಎಜಿಪಿ ತನಗೆ ಹಂಚಿಕೆಯಾದ ಈ 26 ಕ್ಷೇತ್ರಗಳ ಪೈಕಿ ಬರೋಬ್ಬರಿ 13 ಸ್ಥಾನಗಳಲ್ಲಿ ಅಂದರೆ ನಿಖರವಾಗಿ ಶೇಕಡಾ 50ರಷ್ಟು ಕ್ಷೇತ್ರಗಳಲ್ಲಿ ಮುಸ್ಲಿಂ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಅಲ್ಪಸಂಖ್ಯಾತರ ಮತಗಳನ್ನು ಸೆಳೆಯಲು ಪ್ರಾದೇಶಿಕ ಪಕ್ಷವನ್ನು ಮುಂಚೂಣಿಗೆ ತಂದು ಈ ಹೊಸ ಪ್ರಯೋಗಕ್ಕೆ ಎನ್‌ಡಿಎ ಕೈಹಾಕಿದೆ.

ಇದಕ್ಕೆ ತದ್ವಿರುದ್ಧವಾಗಿ, ಮೈತ್ರಿಕೂಟದ ದೊಡ್ಡಣ್ಣ ಬಿಜೆಪಿ ತನ್ನ ಸಾಂಪ್ರದಾಯಿಕ ನಿಲುವಿಗೆ ಅಂಟಿಕೊಂಡಿದೆ. ಒಟ್ಟು 89 ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿರುವ ಬಿಜೆಪಿ, ಈವರೆಗೆ ಪ್ರಕಟಿಸಿರುವ 88 ಅಭ್ಯರ್ಥಿಗಳ ಪಟ್ಟಿಯಲ್ಲಿ ಒಬ್ಬರೇ ಒಬ್ಬ ಮುಸ್ಲಿಂ ಅಭ್ಯರ್ಥಿಗೂ ಮಣೆ ಹಾಕಿಲ್ಲ. ತನ್ನ ಅಭ್ಯರ್ಥಿಗಳ ಪಟ್ಟಿಯಲ್ಲಿ ಮುಸ್ಲಿಮರಿಗೆ ಟಿಕೆಟ್ ನೀಡದೆ ತನ್ನ ಮೂಲ ಹಿಂದುತ್ವದ ಮತಬ್ಯಾಂಕನ್ನು ನೆಚ್ಚಿಕೊಂಡಿದೆ. ತಾನು ನೇರವಾಗಿ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡಿದರೆ ಬಹುಸಂಖ್ಯಾತ ಮತಗಳು ಕೈತಪ್ಪಬಹುದು ಎಂಬ ಲೆಕ್ಕಾಚಾರ ಕೇಸರಿ ಪಕ್ಷದ್ದಾಗಿದೆ. ಇನ್ನೂ ಮೈತ್ರಿಕೂಟದ ಮತ್ತೊಂದು ಪಕ್ಷ ಬೋಡೋಲ್ಯಾಂಡ್ ಪೀಪಲ್ಸ್ ಫ್ರಂಟ್ (ಬಿಪಿಎಫ್) ತನ್ನ ಪಾಲಿಗೆ ದೊರಕಿರುವ 11 ಕ್ಷೇತ್ರಗಳ ಪೈಕಿ ಕೇವಲ ಒಬ್ಬ ಅಭ್ಯರ್ಥಿಗೆ ಅವಕಾಶ ನೀಡಿದೆ.

ಚುನಾವಣೆಯಲ್ಲಿ ಗೆಲ್ಲಲು ಬಿಜೆಪಿ ಎಲ್ಲ ರೀತಿಯ ತಂತ್ರಗಳಿಗೆ ಮುಂದಾಗಿದೆಯೇ ಎಂಬ ಪ್ರಶ್ನೆಗೆ ಅಸ್ಸಾಂನ ಈ ಟಿಕೆಟ್ ಹಂಚಿಕೆ ಸ್ಪಷ್ಟ ಉತ್ತರ ನೀಡುತ್ತದೆ. ಎಜಿಪಿಯ ಈ ನಡೆಯ ಹಿಂದೆ ಬಿಜೆಪಿಯ ನಿಖರವಾದ ಮೈಕ್ರೋ ಮ್ಯಾನೇಜ್‌ಮೆಂಟ್ ಕೆಲಸ ಮಾಡಿದೆ. ತಾನು ನೇರವಾಗಿ ಮಾಡಲಾಗದ ಕೆಲಸವನ್ನು ಮಿತ್ರಪಕ್ಷದ ಮೂಲಕ ಮಾಡಿಸುವ ಜಾಣ್ಮೆಯನ್ನು ಬಿಜೆಪಿ ಇಲ್ಲಿ ಪ್ರದರ್ಶಿಸಿದೆ. ಚುನಾವಣೆಯಲ್ಲಿ ಎದುರಾಳಿಯನ್ನು ಮಣಿಸಲು ಎನ್‌ಡಿಎ ಎಲ್ಲ ಬಗೆಯ ರಣತಂತ್ರಗಳನ್ನು ಪ್ರಯೋಗಿಸುತ್ತಿರುವುದಕ್ಕೆ ಮತ್ತು ಅಧಿಕಾರಕ್ಕಾಗಿ ಯಾವುದೇ ತಂತ್ರಗಾರಿಕೆಗೂ ಸಿದ್ಧ ಎನ್ನುವುದಕ್ಕೆ ಇದೊಂದು ನೈಜ ಉದಾಹರಣೆಯಾಗಿದೆ.

ಅಸ್ಸಾಂನ ಜನಸಂಖ್ಯಾಶಾಸ್ತ್ರವನ್ನು ಗಮನಿಸಿದರೆ ಬರಾಕ್ ಕಣಿವೆ ಮತ್ತು ಕೆಳ ಅಸ್ಸಾಂ ಭಾಗಗಳಲ್ಲಿ ಅಲ್ಪಸಂಖ್ಯಾತರು ನಿರ್ಣಾಯಕವಾಗಿದ್ದಾರೆ. ರಾಜ್ಯದ ಸುಮಾರು 24ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಮುಸ್ಲಿಂ ಮತಗಳೇ ಗೆಲುವನ್ನು ನಿರ್ಧರಿಸುತ್ತವೆ. ಇಂತಹ ಅಲ್ಪಸಂಖ್ಯಾತ ಪ್ರಾಬಲ್ಯದ ಕ್ಷೇತ್ರಗಳಲ್ಲಿ ಬಿಜೆಪಿ ತನ್ನದೇ ಚಿಹ್ನೆಯಡಿ ಸ್ಪರ್ಧಿಸಿದರೆ ಗೆಲುವು ಸಾಧಿಸುವುದು ಅತ್ಯಂತ ಕಷ್ಟಕರ. ಈ ವಾಸ್ತವವನ್ನು ಅರಿತಿರುವ ಬಿಜೆಪಿ, ಆ ನಿರ್ದಿಷ್ಟ ಕ್ಷೇತ್ರಗಳನ್ನು ಮಿತ್ರಪಕ್ಷ ಎಜಿಪಿಗೆ ಬಿಟ್ಟುಕೊಟ್ಟು, ಅಲ್ಲಿ ಪ್ರಬಲ ಮುಸ್ಲಿಂ ಅಭ್ಯರ್ಥಿಗಳನ್ನು ಕಣಕ್ಕಿಳಿಸುವಂತೆ ನೋಡಿಕೊಂಡಿದೆ.

ಈ ತಂತ್ರದ ಹಿಂದಿರುವ ಮತ್ತೊಂದು ಪ್ರಮುಖ ಉದ್ದೇಶವೆಂದರೆ ಪ್ರತಿಪಕ್ಷಗಳ ಮತ ವಿಭಜನೆ ಮಾಡುವುದು. ಅಸ್ಸಾಂನಲ್ಲಿ ಮುಸ್ಲಿಂ ಮತಗಳು ಸಾಂಪ್ರದಾಯಿಕವಾಗಿ ಕಾಂಗ್ರೆಸ್ ಅಥವಾ ಬದ್ರುದ್ದೀನ್ ಅಜ್ಮಲ್ ನೇತೃತ್ವದ ಎಐಯುಡಿಎಫ್ () ಪಾಲಾಗುತ್ತವೆ. ಆದರೆ, ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಎಐಯುಡಿಎಫ್ ನಡುವೆ ಮೈತ್ರಿ ಇಲ್ಲದಿರುವುದು ಎನ್‌ಡಿಎಗೆ ವರದಾನವಾಗಿದೆ. ಇದೇ ಸಂದರ್ಭವನ್ನು ಬಳಸಿಕೊಂಡು ಎಐಯುಡಿಎಫ್‌ನಿಂದ ವಲಸೆ ಬಂದ ಕರೀಮ್ ಉದ್ದೀನ್ ಬರ್ಭುಯಿಯಾ ಮತ್ತು ಝೂಕಿರ್ ಹುಸೇನ್ ಲಸ್ಕರ್ ಅವರಂತಹ ಪ್ರಭಾವಿ ನಾಯಕರಿಗೆ ಎಜಿಪಿ ಟಿಕೆಟ್ ನೀಡಿದೆ.

ಈ ರೀತಿಯ ಪ್ರಬಲ ಮುಸ್ಲಿಂ ನಾಯಕರನ್ನು ಅಖಾಡಕ್ಕಿಳಿಸುವುದರಿಂದ ಕಾಂಗ್ರೆಸ್ ಮತ್ತು ಎಐಯುಡಿಎಫ್‌ಗೆ ಹೋಗಬೇಕಿದ್ದ ಅಲ್ಪಸಂಖ್ಯಾತ ಮತಗಳು ಹಂಚಿಹೋಗಲಿವೆ. ಇದರಿಂದಾಗಿ ವಿರೋಧ ಪಕ್ಷಗಳ ಗೆಲುವಿನ ಹಾದಿ ಕಠಿಣವಾಗಲಿದ್ದು, ಅಂತಿಮವಾಗಿ ಇದರ ಲಾಭ ಎನ್‌ಡಿಎ ಮೈತ್ರಿಕೂಟಕ್ಕೆ ಒಲಿಯಲಿದೆ ಎಂಬುದು ಬಿಜೆಪಿಯ ಲೆಕ್ಕಾಚಾರವಾಗಿದೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಎಜಿಪಿ ಅಧ್ಯಕ್ಷ ಅತುಲ್ ಬೋರಾ ಅವರು, ಅಭ್ಯರ್ಥಿಗಳ ಆಯ್ಕೆಯಲ್ಲಿ ಧರ್ಮಕ್ಕಿಂತ ಅವರು ಗೆಲ್ಲುವ ಸಾಮರ್ಥ್ಯವನ್ನು ಮಾತ್ರ ಪರಿಗಣಿಸಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಇದು ಮೈತ್ರಿಕೂಟದ ಗೆಲುವಿನ ಹಸಿವನ್ನು ಎತ್ತಿತೋರಿಸುತ್ತದೆ.

ಅಧಿಕಾರದ ಗದ್ದುಗೆ ಏರಲು ಕೇವಲ ಭಾಷಣಗಳಷ್ಟೇ ಸಾಲದು, ಬದಲಾಗಿ ಜಾತಿ, ಧರ್ಮ ಮತ್ತು ಕ್ಷೇತ್ರವಾರು ಲೆಕ್ಕಾಚಾರಗಳು ಅತ್ಯಂತ ನಿಖರವಾಗಿರಬೇಕು ಎಂಬುದನ್ನು ಅಸ್ಸಾಂ ಚುನಾವಣೆ ಸಾಬೀತುಪಡಿಸುತ್ತಿದೆ. ತಾನು ತನ್ನ ಸೈದ್ಧಾಂತಿಕ ನಿಲುವಿನಂತೆ ಮುಸ್ಲಿಮರಿಗೆ ಟಿಕೆಟ್ ನಿರಾಕರಿಸಿದರೂ, ಅಧಿಕಾರ ಹಿಡಿಯುವ ಏಕೈಕ ಮಹತ್ವಾಕಾಂಕ್ಷೆಯಿಂದ ಮಿತ್ರಪಕ್ಷಗಳ ಮುಖಾಂತರ ಅದೇ ಮುಸ್ಲಿಂ ನಾಯಕರನ್ನು ಅಖಾಡಕ್ಕಿಳಿಸಿ ವಿರೋಧಿ ಪಾಳೆಯದ ಮತಬ್ಯಾಂಕ್‌ಗೆ ಕನ್ನ ಹಾಕಲು ಬಿಜೆಪಿ ಮಾಸ್ಟರ್ ಪ್ಲಾನ್ ರೂಪಿಸಿದೆ. ಚುನಾವಣಾ ರಣರಂಗದಲ್ಲಿ ಗೆಲುವೊಂದೇ ಅಂತಿಮ ಸತ್ಯ ಎಂಬುದನ್ನು ಅರಿತಿರುವ ಬಿಜೆಪಿ, ಅದಕ್ಕಾಗಿ ತೆರೆಯ ಹಿಂದೆ ಎಲ್ಲ ರೀತಿಯ ರಣತಂತ್ರಗಳನ್ನು ಹೆಣೆಯುತ್ತಿದೆ ಎಂಬುದನ್ನು ಈ ಬೆಳವಣಿಗೆಗಳು ದೃಢಪಡಿಸಿವೆ.

ಅಶೋಕ ಡೆವಲಪರ್ಸ್‌ಗೂ, ಸರ್ಕಾರಿ ನೌಕರರ ಗೃಹ ನಿರ್ಮಾಣ ಸಂಘಕ್ಕೂ ಸಂಬಂಧವಿಲ್ಲ

ಕಲಬುರ್ಗಿ, ಮಾ.22-

ಅಶೋಕ್ ಡೆವಲಪರ್ಸ್‌ಗೂ ಹಾಗೂ ರಾಜ್ಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘಕ್ಕೂ ಯಾವುದೇ ಸಂಬಂಧ ಇಲ್ಲ ಎಂದು ಸಂಘದ ಅಧ್ಯಕ್ಷ ನಾಗಪ್ಪ ಹೊನ್ನಳ್ಳಿ ಅವರು ಆರೋಪಿಸಿದರು.

ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಘವು ಅಶೋಕ್ ಡೆವಲಪ್ಲರ್ಸ್ ಜೊತೆಗೆ ಯಾವುದೇ ಒಪ್ಪಂದ ಮಾಡಿಕೊಂಡಿಲ್ಲ, ಬದಲಾಗಿ ಭೂ ಮಾಲಿಕರೊಂದಿಗೆ ಅಶೋಕ್ ಡೆವಲಪರ್ಸ್ ಒಪ್ಪಂದ ಮಾಡಿಕೊಂಡಿದ್ದು, ಆ ಒಪ್ಪಂದಕ್ಕೂ, ಸಂಘಕ್ಕೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದು ಸ್ಪಷ್ಟಪಡಿಸಿದರು.

ಅಶೋಕ್ ಡೆವಲಪ್‌ರ್ಸ್‌ವರೂ ಯಾವುದೇ ರೀತಿಯಲ್ಲಿ ಅಭಿವೃದ್ಧಿಗಾಗಿ ಹಣ ಖರ್ಚು ಮಾಡಿಲ್ಲ, ಹಾಗಾಗಿ ಅವರಿಗೆ ಹಣ ಕೊಡಬೇಕು ಎಂಬ ಬೇಡಿಕೆ ಸರಿಯಲ್ಲ ಎಂದು ಆಕ್ಷೇಪಿಸಿದ ಅವರು, ಅಶೋಕ್ ಡೆವಲಪರ್ಸ್ ಬದಲಾಗಿ ಪಾಟೀಲ್ ಡೆವಲಪರ್ಸ್ ಸಂಘವು ಒಡಂಬಡಿಕೆ ಮಾಡಿಕೊಂಡಿದೆ ಎಂದರು.

1961ರಲ್ಲಿ ಸ್ಥಾಪನೆಯಾಗಿದೆ. ಈಗ 65ನೇ ವಸಂತದಲ್ಲಿ ಕಾಲಿಟ್ಟಿದೆ. ಕಳೆದ 2025ರ ಮಾರ್ಚ್ 31ರವರೆಗೆ 11,634 ಸರ್ಕಾರಿ ನೌಕರರು ಸದಸ್ಯತ್ವ ಹೊಂದಿದ್ದಾರೆ. ಇಲ್ಲಿಯವರೆಗೆ 3389 ನಿವೇಶನಗಳು ಹಂಚಿಕೆಯಾಗಿವೆ. ಪ್ರಸ್ತುತ ಆಡಳಿತ ಮಂಡಳಿಯ ಅವಧಿ ಯಲ್ಲಿ ಕುಸುನೂರು ಸರ್ವೆ ನಂ. 181/1 ಮತ್ತು 181/3 ರಲ್ಲಿ 401 ನಿವೇಶನಗಳಿಗೆ ಎನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರ ವತಿಯಿಂದ ವಸತಿ ವಿನ್ಯಾಸದ ನಕ್ಷೆ ಅನುಮೋದನೆಯಾಗಿದೆ ಎಂದು ಅವರು ಹೇಳಿದರು.

ಶೇಕಡಾ 40ರಷ್ಟು ಮೊದಲನೆ ಹಂತದಲ್ಲಿ 160 ನಿವೇಶನಗಳು ಬಿಡುಗಡೆಯಾಗಿದ್ದು, ಈ 160 ನಿವೇಶನಗಳು ಪೂರ್ಣ ಹಣ ಪಾವತಿಸಿದ ಸದಸ್ಯರಿಗೆ ಜೇಷ್ಠತಾ ಆಧಾರದಲ್ಲಿ ಲಾಟರಿ ಮೂಲಕ ಹಂಚಿಕೆ ಮಾಡಲಾಗಿದ್ದು, ಒಟ್ಟಾರೆ 3549 ನಿವೇಶನಗಳು ಹಂಚಲಾಗಿದೆ. ಹಾಗೂ ಸದರಿ ಕುಸುನೂರು ಸರ್ವೆ 181/1 ಮತ್ತು 181/3ರಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಳಿಸಿ ಇನ್ನೂಳಿದ ಶೇಕಡಾ 60ರಷ್ಟು ಅಂದರೆ 241 ನಿವೇಶನಗಳು ನಗರಾಭಿವೃದ್ಧಿ ಪ್ರಾಧಿಕಾರ ಆಯುಕ್ತರಿಂದ 2ನೇ ಹಂತದಲ್ಲಿ ಬಿಡುಗಡೆ ಮಾಡಿಕೊಂಡು ಸದಸ್ಯರಿಗೆ ಹಂಚಿಕೆ ಮಾಡಲಾಗುವುದು ಎಂದು ಅವರು ತಿಳಿಸಿದರು.

ಸಂಘದ ಸದಸ್ಯರಿಗೆ ಬಹುದೊಡ್ಡ ಸುಸಜ್ಜಿತ ಬಡಾವಣೆಯನ್ನು ಅಭಿವೃದ್ಧಿ ಪಡಿಸಿ ನಿವೇಶನ ರಹಿತ ಸಂಘದ ಸದಸ್ಯರಿಗೆ ನಿವೇಶನಗಳನ್ನು ಹಂಚಿಕೆ ಮಾಡಬೇಕೆಂಬ ಸದುದ್ದೇಶದಿಂದ ಸಂಘದ ಇತಿಹಾಸದಲ್ಲಿಯೇ ಪ್ರಪ್ರಥಮ ಬಾರಿಗೆ ಕುಸುನೂರು ಸರ್ವೆ ನಂ. 181/1 ಇದರ 15 ಎಕರೆ 30 ಗುಂಟೆ ವಿಸ್ತೀರ್ಣದ ಕೃಷಿ ಜಮೀನು ಚಂದ್ರಶೇಖರ್ ಗುರಪ್ಪ ಹಾವೇರಿ ಅವರಿಂದ 10 ಎಕರೆ 00 ಗುಂಟೆ ವಿಸ್ತೀರ್ಣದ ಕೃಷಿ ಜಮೀನು, ಮಲ್ಲಿಕಾರ್ಜುನ್ ಭೀಮರಾವ್ ಖಜೂರಿ ಅವರಿಂದ ಒಟ್ಟು 25 ಎಕರೆ 30 ಗುಂಟೆ ವಿಸ್ತೀರ್ಣದ ಕೃಷಿ ಜಮೀನುಗಳು ಪ್ರತಿ ಎಕರೆಗೆ 62 ಲಕ್ಷದಂತೆ ಬೆಲೆ ನಿಗದಿ ಪಡಿಸಿ ಸಂಘದ ಹೆಸರಿಗೆ ಖರೀದಿ ಒಡಂಬಡಿಕೆ ಮಾಡಿಕೊಳ್ಳಲಾಗಿದೆ ಎಂದು ಅವರು ಹೇಳಿದರು.

ಮೂಲಭೂತ ಸೌಕರ್ಯಗಳ ಕಾಮಗಾರಿಗಳ ಅಭಿವೃದ್ಧಿಪಡಿಸಲು ಮಾಲಿಕರು ಅಶೋಕ್ ಡೆವಲಪರ್ಸ್ ಅವರಿಗೆ ನೇಮಿಸಿಕೊಂಡಿದ್ದು, ಅವರು ಯಾವುದೇ ರೀತಿಯಲ್ಲಿ ಅಭಿವೃದ್ಧಿ ಮಾಡದೇ ಇರುವುದರಿಂದ ಅವರ ದಾಖಲೆಗಳನ್ನು ರದ್ದುಪಡಿಸಲಾಗಿದೆ ಎಂದು ತಿಳಿಸಿದ ಅವರು, ನ್ಯಾಯವಾದಿ ಆರ್.ಎಸ್. ಕಡಗಂಚಿ ಅವರಿಂದ ಕಾನೂನು ಅಭಿಪ್ರಾಯ ಮತ್ತು ಸಲಹೆ ಪಡೆದುಕೊಂಡು ಪತ್ರ ಡಾಕುಮೆಂಟ್ಸ್ ತಯಾರಿಸುವ ಕೆಲಸ ಕಾರ್ಯಗಳು ಸಂಘದ ನಿರ್ದೇಶಕ ಮತ್ತು ಪ್ರಸ್ತುತ ಎದುರಾಳಿ ಪೆನೆಲಿನಲ್ಲಿ ಸ್ಪರ್ಧಿ ಆನಂದತೀರ್ಥ ಜ್ಯೋಶಿರವರಿಗೆ ಜವಾಬ್ದಾರಿ ವಹಿಸಿಕೊಡಲಾಗಿತ್ತು ಆನಂದತೀರ್ಥ ಜೋಶಿರವರು ಉದ್ದೇಶ ಪೂರ್ವಕವಾಗಿ ದಾಖಲಾತಿಗಳನ್ನು ಸಂಘಕ್ಕೆ ನೀಡಲು ವಿಳಂಬಮಾಡಿರುವ ಬಡಾವಣೆಯಲ್ಲಿ ಅಭಿವೃದ್ಧಿಕಾರ್ಯಗಳು ಸಕಾಲದಲ್ಲಿ ನಿರ್ಮಾಣಮಾಡಲು ತಡೆ ಉಂಟಾಗಿದೆ ಎಂದು ಆರೋಪಿಸಿದರು. ಅವರು ಈಗ ಅರುಣಕುಮಾರ್ ಪಾಟೀಲ್ ಅವರ ನೇತೃತ್ವದ ಪಾಟೀಲ್ ಡೆವಲಪರ್ಸ್‌ಗೆ ಕಾಮಗಾರಿಗಳ ಅಭಿವೃದ್ಧಿಗೆ ವಹಿಸಲಾಗಿದೆ ಎಂದು ಅವರು, ಚುನಾವಣೆಯಲ್ಲಿ ನನ್ನ ನೇತೃತ್ವದಲ್ಲಿನ ಪೆನೆಲ್‌ನಲ್ಲಿ 17 ಜನ ಅಭ್ಯರ್ಥಿಗಳು ಸ್ಪಧಿ ಭೂರ್ ಸಿದ್ದು, ಅವರನ್ನು ಆಯ್ಕೆಗೊಳಿಸಬೇಕು ಎಂದು ಕೋರಿದರು.

ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಬಸವರಾಜ್ ಬಳೊಂಡಗಿ, ಕಾರ್ಯದರ್ಶಿ ಮಹೇಶ್ ಹೂಗಾರ್ ಅವರು ಸೇರಿಕೊಂಡು ಸಹಕಾರ ಸಂಘಗಳ ಉಪ ನಿಬಂಧಕರಿಗೆ ದೂರು ಸಲ್ಲಿಸಿ, ತನಿಖೆಗೆ ಒತ್ತಾಯಿಸಿದ್ದಾರೆ. ನಮ್ಮ ಪೆನೆಲ್ ಪರವಾಗಿ ವಾತಾವರಣ ಇರುವುದರಿಂದ ಇಂತಹ ದೂರು ಸಲ್ಲಿಸಿದ್ದಾರೆ ಎಂದು ಅವರು ಆರೋಪಿಸಿದರು.


ಸದರಿ ಚುನಾವಣೆಯಲ್ಲಿ ನನ್ನ ಮತ್ತು ನನ್ನ ಪೆನಲ್ ವಿರುದ್ಧ ಸರ್ಕಾರಿ ನೌಕರರಲ್ಲದ ಮತ್ತು ಸದಸ್ಯರಲ್ಲದವರಾದ ನ್ಯಾಯವಾದಿಗಳಾದ ಪ್ರಶಾಂತ ಕಾಳಗಿ, ಹರಿಓಂ ಅವರು ಸೇರಿಸಿಕೊಂಡು ಅಶೋಕ ಹೊನ್ನಳ್ಳಿಯವರು ನಮ್ಮ ಮೇಲೆ ಇಲ್ಲಸಲ್ಲದ ಆರೋಪ ಮಾಡಿ ಸಂಘದ ಸರ್ವ ಸದಸ್ಯರಲ್ಲಿ ಗೊಂದಲ ಸೃಷ್ಟಿಸಲು ಮಾಡಿದ ಹುನ್ನಾರವಾಗಿದೆ ಎಂದು ಅವರು ಕಿಡಿಕಾರಿದರು.

ಸುದ್ದಿಗೋಷ್ಠಿಯಲ್ಲಿ ಸಿ.ಎನ್. ಬಾಬಳಗಾಂವ್, ಎಸ್.ಪಿ. ಸುಳ್ಳದ್, ಸಿದ್ದಲಿಮಗ ಬಾಬುರಾವ್ ಕುಲಕರ್ಣಿ, ಅರುಣಕುಮಾರ್ ಎನ್. ಪಾಟೀಲ್, ಈರಣ್ಣ ಸಿದ್ರಾಮಪ್ಪ ಪಾಟೀಲ್, ಗಣೇಶ್ ಬಾಳಪ್ಪ ಕಮ್ಮಾರ್, ಚನ್ನವೀರಯ್ಯ ಗುರುಬಸಯ್ಯ ಸ್ವಾಮಿ, ಅಂಕುಶ್ ತಂದೆ ಶರಣಪ್ಪ ಚಳಕಾಪೂರ್, ಸಿದ್ದಣ್ಣ ಬಿ. ಪೂಜಾರಿ, ಜಿ.ಡಿ. ನಂದಿಕೂರ್, ಪರಮೇಶ್ವರ ಸಾತಲಿಂಗಪ್ಪ ವಾಫುರ್ಗಿ, ಎಂ. ಗಜೇಂದ್ರನಾಥ ಚಿತಾಂಬರ್, ರಿಯಾಜ್ ಅಹ್ಮದ್ ಸೈಯದ್ ತಂದೆ ಇಮಾಮ್ ಹುಸೇನ್ ಸೈಯದ್, ವಿಶ್ವನಾಥ ಶರಣಪ್ಪ ಕಟ್ಟಿಮನಿ, ಜಯಶ್ರೀ ರವಿ ಪಾಟೀಲ್, ಪ್ರಮೀಳಾ ಹನುಮನಗೌಡ ಪಾಟೀಲ್ (ಬಿಬ್ಬಳ್ಳಿ) ಮುಂತಾದವರು ಉಪಸ್ಥಿತರಿದ್ದರು.

ಯಾದಗಿರಿ ಕುಡಿಯುವ ನೀರಿನ ಸಮಸ್ಯೆ ತಪ್ಪಿಸಲು ಶಾಸಕ ಕಂದಕೂರರಿಂದ ಕಟ್ಟುನಿಟ್ಟಿನ ಸೂಚನೆ

ಯಾದಗಿರಿ, ಮಾ.22-

ಮುಂಬರುವ ಬೇಸಿಗೆ ಅವಧಿಯಲ್ಲಿ ಗ್ರಾಮೀಣ ಭಾಗದ ಜನತೆಗೆ ಶುದ್ಧ ಕುಡಿಯುವ ನೀರಿನ ಕೊರತೆ ಉಂಟಾಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಗುರಮಠಕಲ್ ಶಾಸಕ ಶರಣಗೌಡ ಕಂದಕೂರ ತಹಸೀಲ್ದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.



ನಗರದ ಶಾಸಕರ ಜನಸಂಪರ್ಕ ಕಚೇರಿಯಲ್ಲಿ ಶುಕ್ರವಾರ ನಡೆದ ಗುರುಮಠಕಲ್ ಮತ್ತು ಯಾದಗಿರಿ ತಾಲ್ಲೂಕುಗಳ ಕುಡಿಯುವ ನೀರಿನ ಟಾಸ್ಕ್‌ಫೋರ್ಸ್ ಸಭೆಯಲ್ಲಿ ಮಾತನಾಡಿದ ಅವರು, ಕುಡಿಯುವ ನೀರಿನ ನಿರ್ವಹಣೆಗೆ ಸರ್ಕಾರದಿಂದ ಇದುವರೆಗೆ ಅನುದಾನ ಬಿಡುಗಡೆಯಾಗಿಲ್ಲ. ಕಳೆದ ವರ್ಷ ಬೋರವೆಲ್ ಕಾಮಗಾರಿಗಳಿಗೆ ಸಂಬಂಧಿಸಿದಂತೆ 1 ಕೋಟಿಗೂ ಅಧಿಕ ಬಿಲ್ ಬಾಕಿ ಇದೆ. ಇದನ್ನು ಸದನದಲ್ಲೂ ಗಮನಕ್ಕೆ ತಂದಿರುವುದಾಗಿ ಹೇಳಿದರು. ಸೋಮವಾರದೊಳಗಾಗಿ ಹೊಸ ಬೋರವೆಲ್ ಕೊರೆಯುವ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ ಅವರು, ಗುರಮಠಕಲ್ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಆರ್‌ಒ ಪ್ಲಾಂಟ್ ದುರಸ್ತಿ ಹಾಗೂ ನಿರ್ವಹಣೆಗೆ 35.50 ಲಕ್ಷ ರೂ. ಅನುದಾನ ಬಿಡುಗಡೆಯಾಗಿದ್ದು, 28 ಗ್ರಾಮಗಳ ಕುಡಿಯುವ ನೀರಿನ ಘಟಕಗಳನ್ನು ತ್ವರಿತವಾಗಿ ದುರಸ್ತಿ ಮಾಡಬೇಕು ಎಂದರು.

ಅಕಾಲಿಕ ಮಳೆ ಹಾಗೂ ಬಿರುಗಾಳಿಯಿಂದ ಹಾನಿಗೊಳಗಾದ ಬೆಳೆಗಳ ಬಗ್ಗೆ ವರದಿ ಸಲ್ಲಿಸುವಂತೆ ಹಾಗೂ ಗ್ರಾಮೀಣ ಭಾಗಗಳಲ್ಲಿ ವಿದ್ಯುತ್ ಸಮಸ್ಯೆಗಳಿದ್ದರೆ ತಕ್ಷಣ ಪರಿಹರಿಸುವಂತೆ ಸೂಚಿಸಿದರು. ಗುರುಮಠಕಲ್ ಪಟ್ಟಣದ ಲಕ್ಷ್ಮೀನಗರ, ಗಡ್ಡಿ ಮೊಹಲ್ಲಾ ಮತ್ತು ಮರಾಠಾ ವಾಡ ಕಾಲೋನಿಗಳಲ್ಲಿ ನೀರಿನ ಸಮಸ್ಯೆಯಾಗದಂತೆ ಕ್ರಮ ಕೈಗೊಳ್ಳಲು ಸೂಚಿಸಿದರು.

ಸಮಸ್ಯಾತ್ಮಕ ಗ್ರಾಮಗಳ ಮೇಲೆ ವಿಶೇಷ ಗಮನ :

ಮಾರ್ಚ್‌ನಲ್ಲಿ ನಂದೆಪಳ್ಳಿ, ಕಾಳಬೆಳಗುಂದಿ, ಸಣ್ಣ ಸಂಬರ ಸೇರಿದಂತೆ ಹಲವು ಗ್ರಾಮಗಳಲ್ಲಿ ನೀರಿನ ಸಮಸ್ಯೆ ಕಂಡುಬಂದಿದೆ. ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಇನ್ನಷ್ಟು ಗ್ರಾಮಗಳಲ್ಲಿ ಸಮಸ್ಯೆ ಉಂಟಾಗುವ ಸಾಧ್ಯತೆ ಇರುವುದರಿಂದ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು ಎಂದರು. ಅಗತ್ಯವಿದ್ದರೆ ಬಾಡಿಗೆ ಆಧಾರದ ಮೇಲೆ ಬೋರವೆಲ್‌ಗಳನ್ನು ಪಡೆದು ನೀರು ಪೂರೈಕೆ ಮಾಡಲು ಸೂಚಿಸಿದರು.

ಪಂಚಾಯಿತಿಗೆ ಖರ್ಚು ಮಾಡಲು ಅನುಮತಿ : ತಾಪಂಗೆ ಅನುದಾನ ಬಿಡುಗಡೆಯಾಗದ ಹಿನ್ನೆಲೆ, ಕುಡಿಯುವ ನೀರಿನ ಪೈಪ್ಲೈನ್ ಹಾಗೂ ವಿದ್ಯುತ್ ಸಮಸ್ಯೆಗಳ ಪರಿಹಾರಕ್ಕಾಗಿ ಪಂಚಾಯಿತಿಗಳು 50 ಸಾವಿರ ರೂ.ವರೆಗೆ ವೆಚ್ಚ ಮಾಡಬಹುದಾಗಿದೆ ಎಂದು ತಿಳಿಸಿದರು. ಟ್ರಾನ್ಸ್ ಫಾರ್ಮರ್‌ಗಳು ಸುಟ್ಟರೆ ತಕ್ಷಣ ಬದಲಾಯಿಸಲು ಜೆಸ್ಕಾಂ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ತಹಶೀಲ್ದಾರ್ ಚನ್ನಮಲ್ಲಪ್ಪ ಘಂಟಿ, ಇಒ ಅಮರೇಶ ಪಾಟೀಲ್, ಜೆಸ್ಕಾಂ ಅಧಿಕಾರಿಗಳು ಹಾಗೂ ಇತರ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ವಿಜಯನಗರ ಸಂಭ್ರಮದ ಈದುಲ್ ಫಿತ್ರ್ ಆಚರಣೆ



ವಿಜಯನಗರ/ಹೊಸಪೇಟೆ :

ನಗರದಲ್ಲಿ ಈದುಲ್ ಫಿತ್ರ್ ಹಬ್ಬವನ್ನು ಮುಸ್ಲಿಂ ಬಾಂಧವರು ಸಡಗರ, ಸಂಭ್ರಮ ಮತ್ತು ಸ ಹ ಬಾ ಳ ದ ರ ೕ ತ ಿ ಯ ವಾತಾವರಣದಲ್ಲಿ ಆಚರಿಸಿದರು.

ಒಂದು ತಿಂಗಳ ಉಪವಾಸ ಪೂರ್ಣಗೊಳಿಸಿದ ನಂತರ ಚಂದ್ರದರ್ಶನದೊಂದಿಗೆ ಮಸೀದಿಗಳಲ್ಲಿ ಹಾಗೂ ಈದ್ಗಾ ಮೈದಾನಗಳಲ್ಲಿ ಸಾಮೂಹಿಕ ನಮಾಝ್ ಸಲ್ಲಿಸಿ, ವಿಶೇಷ ಪ್ರಾರ್ಥನೆಗಳನ್ನು ನೆರವೇರಿಸಿದರು.

ನಗರದ ವಿವಿಧ ಪ್ರದೇಶಗಳಿಂದ ಆಗಮಿಸಿದ ಸಾವಿರಾರು ಮುಸ್ಲಿಂ ಬಾಂಧವರು ಅಂಬೇಡ್ಕರ್ ಸರ್ಕಲ್ ಸಮೀಪದ ಈದ್ಗಾ ಮೈದಾನದಲ್ಲಿ ಕೂಡಿಕೊಂಡು, ಝಕಾತ್ (ದಾನ) ನೀಡುವ ಮೂಲಕ ಧಾರ್ಮಿಕ ಆಚರಣೆಗಳಲ್ಲಿ ತೊಡಗಿದರು. ಸಾಮೂಹಿಕ ಪ್ರಾರ್ಥನೆಯ ಬಳಿಕ ಪರಸ್ಪರ ಅಲಿಂಗಿಸಿಕೊಂಡು ''ಈದ್ ಮುಬಾರಕ್'' ಎಂದು ಶುಭಾಶಯ ವಿನಿಮಯ ಮಾಡಿಕೊಂಡು ಹಬ್ಬದ ಸಂತಸ ಹಂಚಿಕೊಂಡರು.

ಈದ್ಗಾ ಮೈದಾನದಲ್ಲಿ ನಡೆದ ಕಾರ್ಯಕ್ರಮವನ್ನು ಉದ್ದೇಶಿಸಿ ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಅಂಜುಮನ್ ಖಿದ್ಮತೆ ಇಸ್ಲಾಂ ಸಮಿತಿಯ ಅಧ್ಯಕ್ಷರಾದ ಎಚ್.ಎನ್.ಮುಹಮ್ಮದ್ ಇಮಾಮ್ ನಿಯಾಜಿ ಅವರು ಮಾತನಾಡಿದರು.

ನಗರದ ಆರ್.ಟಿ.ಓ. ಕಚೇರಿ ಹಿಂಭಾಗದ ಈದ್ಗಾ ಮೈದಾನ, ಬಸ್ ಡಿಪೋ ಸಮೀಪದ ಮೈದಾನ, ಗುಲಾಬ್ ಷಾ ವಲಿ ದರ್ಗಾ ಈದ್ಗಾ, ಚಿತ್ತವಾಡ್ಗಿ, ಕಾರಿಗನೂರು, ನಾಗೇನಹಳ್ಳಿ ಹಾಗೂ ಟಿ.ಬಿ. ಡ್ಯಾಮ್ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಸಹ ಭಕ್ತರು ಪ್ರಾರ್ಥನೆ ಸಲ್ಲಿಸಿದರು.

ಪ್ರಾರ್ಥನಾ ಕಾರ್ಯಕ್ರಮದಲ್ಲಿ ಅಂಜುಮನ್ ಸಮಿತಿಯ ಉಪಾಧ್ಯಕ್ಷ ಎಮ್.ಎಮ್. ಫೈರೋಜ್ ಖಾನ್, ಕಾರ್ಯದರ್ಶಿ ಅಬೂಬಕ್ಕರ್ ಅಶ್ರಫಿ, ಖಜಾಂಚಿ ಅನ್ಸರ್ ಭಾಷಾ, ಜಂಟಿ ಕಾರ್ಯದರ್ಶಿ ಡಾ. ದುರ್ವೇಶ್ ಮೈನುದ್ದೀನ್ ಸೇರಿ ದಂತೆ ಸಮಿತಿಯ ಸದಸ್ಯರು, ಸಮಾ ಜದ ಮುಖಂಡರು ಹಾಗೂ ಸಾವಿರಾರು ಮಂದಿ ಭಾಗವಹಿಸಿದ್ದರು.

ಕಲಬುರಗಿ ಮಹಾಡ್ ಸತ್ಯಾಗ್ರಹ ದಮನಿತ ಸಮುದಾಯಕ್ಕೆ ಸ್ಫೂರ್ತಿ : ಡಾ.ನಿರ್ಮಲಾ ಸಿರಗಾಪುರ

ಕಲಬುರಗಿ, ಮಾ.22-

1927ರ ಮಾರ್ಚ್ 20ರಂದು ಡಾ. ಬಾಬಾ ಸಾಹೇಬ ಅಂಬೇಡ್ಕರ್ ಅವರು ಅಸ್ಪೃಶ್ಯ ಜನರ ಕುಡಿಯುವ ನೀರಿನ ಹಕ್ಕಿಗಾಗಿ ನಡೆಸಿದ ಮಹಾಡ್ ಸತ್ಯಾಗ್ರಹವು ಅಹಿಂಸಾತ್ಮಕ ಹೋರಾಟವಾಗಿದ್ದು, ದೇಶದ ದಮನಿತ ಸಮುದಾಯಗಳಿಗೆ ಸ್ಫೂರ್ತಿಯಾಗಿದೆ ಎಂದು ಅರ್ಥಶಾಸ್ತ್ರ ವಿಭಾಗದ ಹಿರಿಯ ಪ್ರಾಧ್ಯಾಪಕಿ ಡಾ.ನಿರ್ಮಲಾ ಸಿರಗಾಪುರ ಹೇಳಿದರು.

ನಗರದ ಕರ್ನಾಟಕ ಪೀಪಲ್ಸ್ ಎಜುಕೇಷನ್ ಸೊಸೈಟಿಯ ಡಾ. ಅಂಬೇಡ್ಕರ್ ಕಲಾ ವಾಣಿಜ್ಯ ಪದವಿ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರದಲ್ಲಿ ನೂರರ ಹೊಸ್ತಿಲಲ್ಲಿ ಮಹಾಡ್ ಸತ್ಯಾಗ್ರಹ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಹಾಡ್ ಸತ್ಯಾಗ್ರಹದ ಹಿನ್ನೆಲೆ ಹಾಗೂ ಮಹತ್ವವನ್ನು ವಿವರಿಸಿದರು.

ಕನ್ನಡ ವಿಭಾಗದ ಪ್ರಾಧ್ಯಾಪಕ ಮತ್ತು ಚಿಂತಕರಾದ ಡಾ. ಅರುಣ್ ಜೋಳದಕೂಡ್ಲಿಗಿ ಮಾತನಾಡಿ, ಮಹಾರಾಷ್ಟ್ರದ ಕೊಲಾಬಾ ಜಿಲ್ಲೆಯ ಮಹಾಡ್‌ನಲ್ಲಿ ನಡೆದ ಚವ್ದಾರ್ ಕೆರೆ ಸತ್ಯಾಗ್ರಹವು ದಮನಿತ ಚಳವಳಿಗಳಲ್ಲಿ ಮೈಲುಗಲ್ಲಾಗಿದೆ. ಡಾ. ಅಂಬೇಡ್ಕರ್ ಅವರು ಸ್ವತಃ ಮುನ್ನಡೆಸಿದ ಈ ಚಳವಳಿ, ಅಸ್ಪೃಶ್ಯ ಸಮುದಾಯದ ಮೂಲಭೂತ ಹಕ್ಕುಗಳಿಗಾಗಿ ನಡೆದ ಐತಿಹಾಸಿಕ ಹೋರಾಟವಾಗಿತ್ತು ಎಂದು ಹೇಳಿದರು.

ಇತಿಹಾಸದ ಪ್ರಾಧ್ಯಾಪಕ ಡಾ. ಗಾಂಧೀಜಿ ಮೋಳಕೆರ್ ಮಾತನಾಡಿ, ಚವ್ದಾರ್ ಕೆರೆ ಸತ್ಯಾಗ್ರಹವು ರಕ್ತರಹಿತ ಅಹಿಂಸಾ ಚಳವಳಿಯಾಗಿದ್ದು, ಬುದ್ಧನ ಕರುಣೆ ಮತ್ತು ಶಾಂತಿಯ ಮೌಲ್ಯಗಳ ಆಧಾರದಲ್ಲಿ ಡಾ. ಅಂಬೇಡ್ಕರ್ ಅವರು ಹೋರಾಟ ನಡೆಸಿದರು ಎಂದು ವಿವರಿಸಿದರು.

ಕಾಲೇಜಿನ ಸಮಾಜಶಾಸ್ತ್ರದ ಪ್ರಾಧ್ಯಾಪಕರಾದ ಡಾ.ಸುದರ್ಶನ ಮದನಕರ್ ಅವರು ನಿರೂಪಿಸಿದರು. ಡಾ.ಹರ್ಷವರ್ಧನ್ ಅವರು ಸ್ವಾಗತಿಸಿದರು. ವೇದಿಕೆಯಲ್ಲಿ ಕಾಲೇಜಿನ ಐಕ್ಯೂಎಸಿ ಸಂಯೋಜಕರಾದ ಡಾ.ಸಿದ್ದಾರ್ಥ ಮದನಕರ್ ಉಪಸ್ಥಿತರಿದ್ದರು. ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಡಾ.ಸಿದ್ದಂಪ್ಪ ಎಸ್.ಕಾಂತ ಅವರು ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಪ್ರಾಧ್ಯಾಪಕರುಗಳಾದ ಡಾ.ದತ್ತುರಾಯ, ಡಾ.ಅರುಣ್ ಕುಮಾರ್, ಡಾ.ಶಿಲ್ಪ, ಗ್ರಂಥಪಾಲಕರಾದ ಡಾ. ರಮೇಶ ಜಾಬನೂರು ಉಪಸ್ಥಿತರಿದ್ದರು. ಡಾ.ಶಿವಕುಮಾರ್ ಅವರು ವಂದಿಸಿದರು.

ಸೌಹಾರ್ದತೆಯ ಕೇಂದ್ರ ಬಿಂದುವಾದ ಪಟೇಲರ ಮನೆಯ ಇಫ್ತಾರ ಕೂಟ!

ಅಫಜಲಪುರ,ಮಾ.22-

ತಾಲೂಕಿನ ಹೆಸರಾಂತ ವಕೀಲರು ಹಾಗೂ ಸಮಾಜ ಸೇವಕರಾದ ಬಳೂಂಡಗಿ ಗ್ರಾಮದ ಎಮ್.ಎಲ್. ಪಟೇಲರು ಮೂಲತಃ ಮುಸ್ಲಿಂ ಧರ್ಮಿಯರಾದರೂ ಸರ್ವಧರ್ಮಿಯರ ಪ್ರೀತಿ ಪಾತ್ರರಾಗಿದ್ದಾರೆ ಎಂದರೆ ತಪ್ಪಾಗಲಾರದು. ಏಕೆಂದರೆ ಸ್ವ-ಧರ್ಮಿಯರಿಗಿಂತ ಅನ್ಯಧರ್ಮಿಯರೊಂದಿಗೆ ಅನ್ಯೋನ್ಯತೆ ಸಂಬಂಧ ಹೊಂದಿರುವ ಪಟೇಲರು ಎಲ್ಲಾ ಧರ್ಮದ ಹಬ್ಬ ಹರಿದಿನಗಳಲ್ಲಿ ಎಲ್ಲರೊಂದಿಗೆ ಬೆರೆತು ಅವರಲ್ಲೊಬ್ಬರಾಗುತ್ತಾರೆ.ತಮ್ಮ ಸ್ವ-ಗ್ರಾಮ ಬಳೂಂಡಗಿಯಲ್ಲಿ ರಂಜಾನ್ ಹಬ್ಬದ ಪ್ರಯುಕ್ತ ತಾಲೂಕಿನ ಎಲ್ಲಾ ಧರ್ಮದ ಮುಖಂಡರಿಗೂ ಹಾಗೂ ಸಂಘ ಸಂಸ್ಥೆಗಳ ಮುಖಂಡಿ ರಿಗೂ ಸಾರ್ವಜನಿಕವಾಗಿ ಹಬ್ಬದ ಸಿಹಿ ಭೋಜನ ಏರ್ಪಡಿಸಿದರು.

ಎಮ್.ಎಲ್.ಪಟೇಲರ ಮನದಾಳದ ಮಾತಿನನ್ವಯ ರಂಜಾನ್ ಹಬ್ಬ ಕೇವಲ ಮುಸ್ಲಿಮರ ಹಬ್ಬವಾಗಿರದೆ ಮಾನವ ಕುಲದ ಅಪ್ಪುಗೆಯ ಭಾಂದವ್ಯದ ಸಂಕೇತವಾಗಿದೆ.ಒಂದು ತಿಂಗಳು ಪರಿಯಂತ ಉಪವಾಸ (ರೋಜಾ) ಮಾಡಿ ಪ್ರತಿನಿತ್ಯ ದೇವರನ್ನು(ಅಲ್ಲಾಹನನ್ನು) ಪ್ರಾರ್ಥಿಸಿ ಸಕಲ ಜೀವಾತ್ಮರಿಗೂ ಒಳಿತನ್ನು ಬಯಸುವ ಈ ತಿಂಗಳು ಮುಸ್ಲಲ್ಮಾನರಿಗೆ ವಿಶೇಷ ತಿಂಗಳಾಗಿರುತ್ತದೆ.ನಮ್ಮ ಹಿರಿಯರಿಂದ ಇಲ್ಲಿಯವರೆಗೂ ನಮ್ಮ ಮನೆಯಲ್ಲಿ ಎಲ್ಲಾ ಧರ್ಮದ ಸಹೋದರ- ಸಹೋದರಿಯರನ್ನು ನಮ್ಮ ಮನೆಗೆ ಕರೆದು ಸತ್ಕರಿಸುವುದು ಮುಂದುವರೆಯುತ್ತ ಬಂದಿದೆ.ನಮ್ಮ ಅಲ್ಪ ಕರೆಗೆ ಓಗೊಟ್ಟು ತಾಲೂಕಿನ ಪ್ರತಿಯೊಬ್ಬರೂ ಎಲ್ಲಾ ಸಹೋದರ ಬಾಂದವರು ಬಂದು ರಂಜಾನ್ ಹಬ್ಬದ ವಿಶೇಷ ಸುರಕುಂಬ ಸವಿಯುತ್ತಾರೆ.ಎಲ್ಲಾ ಧರ್ಮದ ಮುಖಂಡರ ಆಗಮನದಿಂದ ಈ ಹಬ್ಬಕ್ಕೆ ನಮ್ಮ ಮನೆಯಲ್ಲಿ ವಿಶೇಷ ಸಂತಸ ಏರ್ಪಡುತ್ತದೆ ಎಂದರು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR